ಧಾರವಾಡ * ಕಾರವಾರ * ಹಾವೇರಿ * ಕೊಪ್ಪಳ * ಬಳ್ಳಾರಿ * ಬಾಗಲಕೋಟ * ವಿಜಯನಗರ * ಗದಗದಿಂದ ಏಕ ಕಾಲಕ್ಕೆ ಒಂದೇ ಸಂಚಿಕೆ ಪ್ರಕಟಗೊಳ್ಳುವ ದಿನ ಪತ್ರಿಕೆ



# ಸ್ನೇಹ ಜೀವಿ

ಉತ್ತರ ಕರ್ನಾಟಕದ ಧ್ವನಿ...!

SNEHAJEEVI KANNADA DAILY

ಕನ್ನಡ ದಿನಪತ್ರಿಕೆ




ಡಾ. ಎ.ಎನ್. ಶಾಲಗಾರ ಸಾರಥ್ಯದಲ್ಲಿ | MAG: PRBCR-10/2016-17 | Mob: 94827 70999 | e-mail: snehajeevidaily@gmail.com | Editor: Dr. A.N. Shalagar

RNI NO. KARKAN/2013/49379 | Volume / ಸಂಪುಟ : 14 | Issue / ಸಂಚಿಕೆ : 210 | Date : 30-08-2025 ಶನಿವಾರ | Page / ಪುಟ : 4 | ಗದಗ–GADAG | Rs. 2/-

ಪುಟ -4 ಹೆಣ್ಣು ಭ್ರೂಣ ಹತ್ಯೆ ದಂಧೆ ಜಿಲ್ಲೆಗೆ ಕಾಲಿಟ್ಟಿದೆಯೇ? : ಪ್ರಕರಣ ದಾಖಲಿಸಲು ಸೂಚನೆ

ಪುಟ -3 ಡಾ. ಶಿವರಾತ್ರಿ ಸ್ವಾಮಿಗಳ ಸಂದೇಶ ಸರ್ವಕಾಲಕ್ಕೂ ಪ್ರಸ್ತುತ

ಪುಟ -2 ರಾಷ್ಟ್ರೀಯ ಕ್ರೀಡಾ ದಿನಾಚರಣೆಗೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಶ್ರೀಧರ

ಪುಟ -4 ನದಿಯಲ್ಲಿ ಈಜಿದ ಚಿರತೆಗಳು

# ಉಕ್ರೇನ್ ಮೇಲೆ ರಷ್ಯಾ ದಾಳಿ

❑ ಸ್ನೇಹಜೀವಿ ನ್ಯೂಸ್

ಕೈವ್,ಆ.25– ರಷ್ಯಾ ಮತ್ತು ಉಕ್ರೇನ್ ನಡುವೆ ಕದನ ವಿರಾಮಕ್ಕೆ ಪ್ರಯತ್ನ ಮಾಡುತ್ತಿರುವ ನಡುವೆ ಉಕ್ರೇನ್ ಮೇಲೆ ರಷ್ಯಾ ಮತ್ತೆ ದಾಳಿ ಮಾಡಿದ್ದು ಬಿಗುವಿನ ವಾತಾವರಣ ನಿರ್ಮಾಣವಾಗಿದೆ.

ದಾಳಿಯ ಹಿನ್ನೆಲೆಯಲ್ಲಿ ಸ್ಥಳೀಯರು ಸುರಕ್ಷಿತ ಸ್ಥಳಗಳಿಗೆ ತೆರಳುತ್ತಿದ್ದಾರೆ. ರಷ್ಯಾ ದಾಳಿಗೆ ಪ್ರತೀಕಾರವಾಗಿ ಉಕ್ರೇನ್ ಕೂಡ ದಾಳಿ ನಡೆಸು ಸಾಧ್ಯತೆ ಇದೆ ಎನ್ನಲಾಗಿದ್ದು ಈ ಹಿನ್ನೆಲೆಯಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.

ಪೂರ್ವ ಉಕ್ರೇನ್‌ನ ಡೊನೆಟ್ಸ್ಕ್ ಪ್ರದೇಶದಲ್ಲಿ ರಷ್ಯಾ ದಾಳಿ ನಡೆಸಿದೆ. ಕದನ ವಿರಾಮ ಜಾರಿ ಮಾಡಲು ಅಮೇರಿಕಾ ಸೇರಿದ<ತೆ ಅನೇಕ ದೇಶಗಳು ಇನ್ನಿಲ್ಲದ ಕಸರತ್ತು ನಡೆಸುತ್ತಿರುವ ನಡುವೆ ಈ ದಾಳಿ ನಡೆದಿದೆ.

ರಷ್ಯಾ ಈಗಾಗಲೇ ಡೊನೆಟ್ಸ್ಕ್‌ನ ಶೇಕಡಾ 70ರಷ್ಟು ಭಾಗ ಮತ್ತು ಮತ್ತು ನೆರೆಯ



ಲುಹಾನ್ಸ್ಕ್‌ನ ಬಹುತೇಕ ಎಲ್ಲಾ ಭಾಗವನ್ನು ನಿಯಂತ್ರಣಕ್ಕೆ ತೆಗೆದುಕೊಂಡಿದೆ, ಇದು ಉಕ್ರೇನ್‌ನ ಭಾಗವಾಗಿದೆ.

ರಷ್ಯಾದ ಗಡಿ ಭಾಗದಿಂದ ಕೇವಲ ಕೇವಲ 8 ಕಿಮೀ ದೂರದಲ್ಲಿರುವ ಈ ಪ್ರದೇಶದ ಉಕ್ರೇನ್ ಭೂಪ್ರದೇಶಕ್ಕೆ ಒಳಪಟ್ಟಿದೆ.

ಡೊನೆಟ್ಸ್ಕ್ ಪಟ್ಟಣದಿಂದ ಜನರು,ರೋಗಿಗಳು, ವೃದ್ಧರು ಮತ್ತು ಮಕ್ಕಳನ್ನು ಸುರಕ್ಷಿತ ಸ್ಥಳಕ್ಕೆ ವಲಸೆ ಹೋಗುತ್ತಿದ್ದಾರೆ.

ಮೇಲ್ಭಾವಣಿಯ ಡ್ರೋನ್–ಜಾಮಿಂಗ್ ಉಪಕರಣಗಳನ್ನು ಹೊಂದಿದ್ದು, 130 ಕಿಮೀ/ಗಂಟೆಗೆ ವೇಗದಲ್ಲಿ ಚಲಿಸುತ್ತೇವೆ. ರಸ್ತೆ ಎತ್ತರದ ಹಸಿರು ಬಲೆಯಿಂದ ಆವೃತವಾಗಿದ್ದು, ಅದು ಮೇಲಿನಿಂದ ಗೋಚರತೆಯನ್ನು ಅಸ್ಪಷ್ಟಗೊಳಿಸುತ್ತದೆ.

ಉಳಿದಿರುವ ಕೆಲವೇ ನಿವಾಸಿಗಳು ತಮ್ಮ ಮನೆಗಳನ್ನು ಬಿಟ್ಟು ಬೇಗನೆ ತೆರಳುವಂತೆ ಸೂಚಿಸಲಾಗಿದೆ. ಈ ಪಟ್ಟಣ ಈಗಾಗಲೇ ಕೈಬಿಟ್ಟಂತೆ ಕಾಣುತ್ತಿದೆ ಮತ್ತು ಕಳೆದ ವಾರದಿಂದ ವಲಸೆ ಹೋಗುವುದು ಹೆಚ್ಚಾಗಿದೆ ಎಂದು ಸ್ಥಳೀಯರು ಹೇಳಿದ್ದಾರೆ.

**ಐದು ದಿನಗಳಲ್ಲಿ, ಯೂನಿವರ್ಸಲ್ ಏಡ್ ಉಕ್ರೇನ್ ಎಂಬ ಚಾರಿಟಿಗಾಗಿ ಕೆಲಸ ಮಾಡುವ 31 ವರ್ಷದ ಜರ್ಮನ್ ಲಾರ್ಜ್ ಮತ್ತು 19 ವರ್ಷದ ಉಕ್ರೇನಿಯನ್ ವರಿಯಾ ಜನರನ್ನು ಸ್ಥಳಾಂತರಿಸಲು ಡಜನ್ಗಟ್ಟಲೆ ಪ್ರವಾಸ ಮಾಡಿದ್ದಾರೆ.**

## ಗ್ಯಾಸ್ ಸಿಲಿಂಡರ್ ಸ್ಫೋಟ



❑ ಸ್ನೇಹಜೀವಿ ನ್ಯೂಸ್

ಬಾಗಲಕೋಟೆ: ಜಿಲ್ಲೆಯ ಬಾದಾಮಿಯಲ್ಲಿ ಗುರುವಾರ ರಾತ್ರಿ ಸಿಲಿಂಡರ್ ಸ್ಫೋಟಗೊಂಡು 6 ಜನ ಗಾಯಗೊಂಡಿದ್ದಾರೆ.

ಪುಲಿಕೇಶಿ ಬ್ಯಾಂಕ್ ಪಕ್ಕದ ಜಮಾದಾರ್ ಸೈಕಲ್ ಸ್ಟೋರ್ ನಲ್ಲಿ ಅಕ್ರಮವಾಗಿ ಪುಟ್ಟ ಸಿಲಿಂಡರ್‌ಗಳನ್ನು ಸಂಗ್ರಹಿಸಿ ಇಡಲಾಗಿತ್ತು. ಬೆಂಕಿಯ ಕಿಡಿ ತಾಗಿ ಸಿಲಿಂಡರ್ ಸ್ಫೋಟ ಗೊಂಡಿವೆ. ಅಂಗಡಿ ಬಾಗಿಲು ತೆರೆಯಲು ಹೋದ ಮಾಲೀಕ ಸೇರಿದಂತೆ 6 ಜನರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು. ಬಾದಾಮಿ ಠಾಣೆ ಪೊಲೀಸರು ತನಿಖೆ ನಡೆಸಿದ್ದಾರೆ. ಎಸ್ಪಿ ಸಿದ್ಧಾರ್ಥ ಗೋಯಲ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಕೈಗೊಂಡಿದ್ದಾರೆ.

## ಲೋಕಾಯುಕ್ತ ಬಲೆಗೆ ಬಿದ್ದ ಎಸಿಪಿ ಸುಬೇದಾರ್ ಸೇರಿ 5 ಜನರನ್ನು ವಶಕ್ಕೆ




❑ ಸ್ನೇಹಜೀವಿ ನ್ಯೂಸ್

ಕಲಬುರಗಿ: ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಕಲಬುರಗಿ ದಕ್ಷಿಣ ವಿಭಾಗದ ಎಸಿಪಿ ಶರಣಬಸಪ್ಪಾ ಸುಬೇದಾರ್, ರೈಟರ್ ಚಂದ್ರಕಾಂತ್, ಕಾನ್ಸಟೇಬಲ್ ರಾಘವೇಂದ್ರ, ಇಬ್ಬರು ಖಾಸಗಿ ವ್ಯಕ್ತಿಗಳಾದ ದಸ್ತಗೀರ್ ಮತ್ತು ಶಿವಪ್ಪ ಸೇರಿ 5 ಜನರನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ರೇವಣಸಿದ್ದಪ್ಪ ಎಂಬುವರ ಬಳಿ 40 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟು ಹಣ ಪಡೆಯುವಾಗ ರೆಡ್ ಹ್ಯಾಂಡ್ ಆಗಿ ಲೋಕಾ ಬಲೆಗೆ ಬಿದ್ದಿದ್ದಾರೆ. ಲೋಕಾಯುಕ್ತ ಎಸ್‌ಪಿ ಸಿದ್ದರಾಜು ನೇತೃತ್ವದಲ್ಲಿ ಪೊಲೀಸರು ದಾಳಿ ನಡೆಸಿ 5 ಜನರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ ಎಂದು ತಿಳಿದು ಬಂದಿದೆ.

## ಪೊಲೀಸರ ಸುಪರ್ದಿಯಲ್ಲಿ ಗಣೇಶನ ಮೂರ್ತಿ ವಿಸರ್ಜನೆ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ತನಿಖೆಗೆ ಆದೇಶ!



❑ ಸ್ನೇಹಜೀವಿ ನ್ಯೂಸ್

ಗದಗ: ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ವೃತ್ತಿಪರ ಹಾಸ್ಟೆಲ್‌ನಲ್ಲಿ ಗಣೇಶ್ ಹಬ್ಬ ಆಚರಣೆಗೆ ಸಂಬಂಧಿಸಿದಂತೆ ವಸತಿ ನಿಲಯದ ವಿದ್ಯಾರ್ಥಿಗಳು ಹಾಗೂ ವಾರ್ಡನ್ ನಡುವೆ ತೀವ್ರ ಗಲಾಟೆಗೆ ಸಂಬಂಧಿಸಿದಂತೆ ಪ್ರಕರಣದ ಸಮಗ್ರ ತನಿಖೆ ನಡೆಸುವಂತೆ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಆದೇಶಿಸಿದ್ದಾರೆ.

ಪೊಲೀಸರ ಸುಪರ್ದಿಯಲ್ಲಿ ತಡರಾತ್ರಿ ಗಣೇಶನನ್ನು ವಿಸರ್ಜನೆ ಮಾಡಿದ್ದ ವಸತಿ ನಿಲಯದ ವಾರ್ಡನ್ ರಿಯಾಜ್ ಅಗರಖೇಡ್ ಎಂಬುವವರನ್ನು ಎತ್ತಂಗಡಿ ಮಾಡಿದ್ದು. ವಾರ್ಡನ್ ಆಗಿ ರೋಣ ತಾಲೂಕ ಕೌಜಗೇರಿ ಗ್ರಾಮದ ಡಾ.ಬಿ.ಆರ್. ಅಂಬೇಡ್ಕರ ವಸತಿ ನಿಲಯದ ವಾರ್ಡನ್ ರಂಗಪ್ಪ ಓಲೇಕಾರ ಅವರಿಗೆ ಪ್ರಭಾರ ವಹಿಸಲಾಗಿದೆ.

ಕಳಸಾಪೂರ ರಸ್ತೆಯಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ವೃತ್ತಿಪರ ಹಾಸ್ಟೆಲ್‌ನಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆಯನ್ನು ಪ್ರತಿವರ್ಷದಂತೆ ಮೂರು ದಿನಗಳ ಕಾಲ ಮಾಡದೇ ಒಂದೇ ದಿನಕ್ಕೆ ವಿಸರ್ಜನೆ ಮಾಡಿದ್ದ ವಸತಿ ನಿಲಯದ ವಾರ್ಡನ್ ರಿಯಾಜ್ ಅಗರಖೇಡ್ ವಿರುದ್ಧ ವಿದ್ಯಾರ್ಥಿಗಳು ಬಂಡೆದಿದ್ದರು. ವಾರ್ಡನ್ ಹಿಂದೂ ಹಬ್ಬಗಳನ್ನು ಆಚರಣೆ ಮಾಡದಂತೆ ಕಿರುಕುಳ ನೀಡುತ್ತಿದ್ದನೆಂದು ವಿದ್ಯಾರ್ಥಿಗಳು ಆರೋಪಿಸಿದ್ದರು.

ಈ ಮಧ್ಯೆ ವಸತಿ ನಿಲಯದ ವಾರ್ಡನ್ ರಿಯಾಜ್ ಅಗರಖೇಡ್ ಪೊಲೀಸರ ಸುಪರ್ದಿಯಲ್ಲಿ ಗಣೇಶ ವಿಗ್ರಹವನ್ನು ವಿಸರ್ಜನೆ ಮಾಡಿದ್ದರಿಂದ ವಿದ್ಯಾರ್ಥಿಗಳು ತೀವ್ರ ಅಕ್ರೋಶ ವ್ಯಕ್ತಪಡಿಸಿದ್ದರು."ಡಾ.ಬಿ.ಆರ್ ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ವೃತ್ತಿಪರ ಹಾಸ್ಟೆಲ್ ನಿಲಯ ಪಾಲಕ ರಿಯಾಜ್ ಅಗರಖೇಡ್ ಅವರನ್ನು ವಿದ್ಯಾರ್ಥಿಗಳ ದೂರಿನ ಮೇಲೆ ಮತ್ತೊಂದು ವಸತಿ ನಿಲಯಕ್ಕೆ ವರ್ಗಾಯಿಸಲಾಗಿದೆ. ವಾರ್ಡನ್ ಕ್ರಮದ ಬಗ್ಗೆ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಲಾಗುವುದು" ಎಂದು ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ನಂದಾ ಹನಬರಹಟ್ಟಿ ಹೇಳಿದ್ದಾರೆ.

## ಭಾರತದಲ್ಲಿ ಹೂಡಿಕೆ ಕೇವಲ ಬೆಳೆಯೋದಲ್ಲ, ಗುಣಿಸಲ್ಪಡುತ್ತದೆ',ಜಪಾನ್‌ನಲ್ಲಿ ಮೇಕ್ ಇನ್ ಇಂಡಿಯಾಗೆ ಕರೆ ನೀಡಿದ ಮೋದಿ




ಟೋಕಿಯೋ: 15ನೇ ಭಾರತ–ಜಪಾನ್ ವಾರ್ಷಿಕ ಶೃಂಗಸಭೆಯಲ್ಲಿ ಭಾಗವಹಿಸಲು ಎರಡು ದಿನಗಳ ಅಧಿಕೃತ ಭೇಟಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಟೋಕಿಯೋಗೆ ತಲುಪಿದ್ದಾರೆ. ಅಲ್ಲಿ ಅವರಿಗೆ ಅದ್ದೂರಿ ಸ್ವಾಗತವನ್ನು ಕೋರಲಾಯಿತು.

ನಂತರ ಭಾರತ–ಜಪಾನ್ ಜಂಟಿ ಆರ್ಥಿಕ ವೇದಿಕೆಯನ್ನುದ್ದೇಶಿಸಿ ಭಾಷಣ ಮಾಡಿದ ಪ್ರಧಾನಿ ನರೇಂದ್ರ ಮೋದಿ, ಎರಡೂ ರಾಷ್ಟ್ರಗಳ ನಡುವಿನ ಆಳವಾದ ಕಾರ್ಯತಂತ್ರ ಮತ್ತು ಆರ್ಥಿಕ ಪಾಲುದಾರಿಕೆಯ ಮಹತ್ವದ ಬಗ್ಗೆ ಮಾತನಾಡಿದರು. ತಮ್ಮ ಭಾಷಣದಲ್ಲಿ ಪ್ರಧಾನಿ ಮೋದಿ, 'ಭಾರತದಲ್ಲಿ ಬಂಡವಾಳವು ಕೇವಲ ಬೆಳೆಯುವುದಿಲ್ಲ, ಅದು ಗುಣಿಸುತ್ತದೆ' ಎಂದು ಹೇಳಿದರು,

ಇದು ದೇಶದ ಕ್ರಿಯಾತ್ಮಕ ಹೂಡಿಕೆ ವಾತಾವರಣವನ್ನು ಒತ್ತಿಹೇಳುತ್ತದೆ. ಜಪಾನಿನ ಕಂಪನಿಗಳು ಭಾರತದಲ್ಲಿ 40 ಶತಕೋಟಿಗಿಂತ ಹೆಚ್ಚು ಹೂಡಿಕೆ ಮಾಡಿವೆ, ಕಳೆದ ಎರಡು ವರ್ಷಗಳಲ್ಲಿ ಮಾತ್ರ 13 ಶತಕೋಟಿ ಹರಿದು ಬಂದಿದೆ. ಇದು ಭಾರತದ ಬೆಳವಣಿಗೆಯ ಪಥದಲ್ಲಿ ಬಲವಾದ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಬಹಿರಂಗಪಡಿಸಿದರು.

**ಜಪಾನಿನ ವ್ಯಾಪಾರ ಸಮುದಾಯವನ್ನು ಉದ್ದೇಶಿಸಿ ಮಾತನಾಡುತ್ತಾ, 'ಬನ್ನಿ ಮೇಕ್ ಇನ್ ಇಂಡಿಯಾ, ಮೇಕ್ ಫಾರ್ ದಿ ವರ್ಲ್ಡ್'ಎಂಬ ಆತ್ಮೀಯ ಆಹ್ವಾನ ನೀಡಿದರು. ಜಾಗತಿಕವಾಗಿ ಉತ್ಪಾದನೆ ಮತ್ತು ನಾವೀನ್ಯತೆಯನ್ನು ಹೆಚ್ಚಿಸಲು ಭಾರತದ ಪಾರದರ್ಶಕ ಆಡಳಿತ ಮತ್ತು ಬಲವಾದ ನೀತಿ ವಾತಾವರಣವನ್ನು ಬಳಸಿಕೊಳ್ಳುವಂತೆ ಅವರು ಕಂಪನಿಗಳನ್ನು ಒತ್ತಾಯಿಸಿದರು.**

## ರಾಜ್ಯದ ಜನತೆಗ ಮತ್ತೊಂದು ಶಾಕ್: ಆಸ್ತಿ ನೋಂದಣಿ ಶುಲ್ಕ ಹೆಚ್ಚಳ!

❑ ಸ್ನೇಹಜೀವಿ ನ್ಯೂಸ್


ಬೆಂಗಳೂರು (ಆ.29): ಬೆಲೆ ಏರಿಕೆ ಬಿಸಿ ಜನರ ಸಾಮಾನ್ಯರನ್ನು ತಟ್ಟುತ್ತಲೇ ಇದೆ. ಒಂದೊಂದು ವಸ್ತುಗಳ ಬೆಲೆ ಕೂಡ ಹೆಚ್ಚುತ್ತಲೇ ಇದೆ. ಜನರಿಗೆ ಶಾಕ್ ಮೇಲೆ ಶಾಕ್ ಎದುರಾಗ್ತಿದೆ. ಈ ದುಬಾರಿ ದುನಿಯಾದಲ್ಲಿ ಸಾಲು ಸಾಲು ಬೆಲೆ ಏರಿಕೆಗಳಿಗೆ ಜನ ತತ್ತರಿ ಹೋಗಿದ್ದಾರೆ. ಹಾಲು, ನೀರು, ಬಸ್ಸು, ವಿದ್ಯುತ್, ಮೆಟ್ರೋ ಬಳಿಕ ಇದೀಗ ಆಸ್ತಿಗಳ ನೋಂದಣಿ ಶುಲ್ಕವನ್ನು ಹೆಚ್ಚಳ ಮಾಡಿ ಕಂದಾಯ ಇಲಾಖೆ ಆದೇಶ ಹೊರಡಿಸಿದೆ.

### ಆಸ್ತಿ ನೋಂದಣಿ ಶುಲ್ಕ ಹೆಚ್ಚಳ

ಸಾಲು ಸಾಲು ಬೆಲೆ ಏರಿಕೆ ನಡುವೆ ಜನತೆಗೆ ಮತ್ತೊಂದು ಶಾಕ್ ಎದುರಾಗಿದೆ. ಆಸ್ತಿ ನೋಂದಣಿ ಶುಲ್ಕ ಶೇ.1 ರಿಂದ ಶೇ.2 ರಷ್ಟು ಏರಿಕೆ ಮಾಡಲಾಗಿದೆ. ಈ ಶುಲ್ಕ ಹೆಚ್ಚಳ ಆಗಸ್ಟ್ 31ರಿಂದ ಅನ್ವಯವಾಗಲಿದೆ.

ಕಟ್ಟಬೇಕು ಶೇ.7.6ರಷ್ಟು ಶುಲ್ಕ

ರಾಜ್ಯದಲ್ಲಿ ನಿವೇಶನ, ಭೂಮಿ, ಮನೆ ಸೇರಿದಂತೆ ಸ್ಥಿರಾಸ್ತಿ ಖರೀದಿ ವೇಳೆ ಶೇ.1 ರಷ್ಟು ನೋಂದಣಿ ಶುಲ್ಕ, ಶೇ.5.6ರಷ್ಟು




ಮುದ್ರಾಂಕ ಶುಲ್ಕ ಸೇರಿ ಶೇ.6.6ರಷ್ಟು ಶುಲ್ಕ ವಿಧಿಸಲಾಗ್ತಿತ್ತು. ಆದ್ರೆ ಈಗ ಶುಲ್ಕ ದುಪ್ಪಟ್ಟಾಗಿದೆ. ನೊಂದಣಿಗೆ ಒಟ್ಟು ಶೇ.7.6ರಷ್ಟು ಶುಲ್ಕ ಕಟ್ಟಬೇಕು.

**ಶುಲ್ಕ ಹೆಚ್ಚಳದ ಬಗ್ಗೆ ಕಂದಾಯ ಇಲಾಖೆ ಆದೇಶ ಹೊರಡಿಸಿದ್ದು ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಎಲ್ಲಾ ಉಪ ನೋಂದಣಾಧಿಕಾರಿಗಳಿಗೆ ಸೂಚನೆ ನೀಡಿದೆ.**

## ಧರ್ಮಸ್ಥಳ ಕೇಸ್ ಬಗ್ಗೆ ಸುತ್ತೂರು ಶ್ರೀಗಳ ಪ್ರತಿಕ್ರಿಯೆ

❑ ಸ್ನೇಹಜೀವಿ ನ್ಯೂಸ್

ಮೈಸೂರು: ಧರ್ಮಸ್ಥಳ ಕೇಸ್ ಬಗ್ಗೆ ಸುತ್ತೂರು ಶ್ರೀಗಳು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಧರ್ಮಸ್ಥಳವನ್ನು ವಿವಾದಿತ ಕೇಂದ್ರವನ್ನಾಗಿಸುತ್ತಿರುವುದು ವಿಷಾದನೀಯ ಅಂತ ಮೈಸೂರಿನ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕಳವಳ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ನಂಬಿಕೆ ಎಂಬುದು ಸೂಕ್ಷ್ಮವಾದ ಸಂಗತಿ. ಅದು ಕನ್ನಡಿ ಇದ್ದಂತೆ, ಒಮ್ಮೆ ಒಡೆದು ಹೋದರೆ ಮತ್ತೆ ಸರಿ ಮಾಡಲು ಆಗಲ್ಲ. ಒಡೆದ ಕನ್ನಡಿ ಪ್ರತಿ ಚೂರಿನಲ್ಲಿ ಪ್ರತ್ಯೇಕ ಬಿಂಬ ಕಾಣಿಸುತ್ತೆ ಎಂದಿದ್ದಾರೆ.

ಶ್ರೀಕ್ಷೇತ್ರದೊಂದಿಗೆ ತಳುಕು ಹಾಕುವುದು ಸರಿಯಲ್ಲ

ಧಾರ್ಮಿಕ ಕ್ಷೇತ್ರದ ಮೇಲೆ ಒಂದಲ್ಲ ಒಂದು ವಿವಾದ ಮುನ್ನೆಲೆಗೆ ತರುತ್ತಿರುವ ಪ್ರಯತ್ನ ಸೂಕ್ತವಲ್ಲ. ಧರ್ಮಸ್ಥಳದ ಪರಿಸರದಲ್ಲಿ ನಡೆದ ಕೆಲವು ಅಸಹಜ ಸಾವಿನ ಪ್ರಕರಣಗಳು ಗಂಭೀರವಾದುದೇ ಆಗಿದೆ. ಆದರೆ ಅದನ್ನು ಶ್ರೀಕ್ಷೇತ್ರದೊಂದಿಗೆ ತಳುಕು ಹಾಕಲು ಪ್ರಯತ್ನಿಸುವುದು ದುಡುಕಿನ ನಿರ್ಧಾರ ಅಂತ ಶ್ರೀಗಳು ವಿಷಾದ ವ್ಯಕ್ತಪಡಿಸಿದ್ದಾರೆ.



ಸತ್ಯ ಸದಾ ಮೌನಿ, ಸುಳ್ಳಿಗೆ ಆರ್ಭಟ ಜಾಸ್ತಿ ಅಂತ ಶ್ರೀಗಳು ಅಭಿಪ್ರಾಯ ಪಟ್ಟಿದ್ದಾರೆ. ಇದರಿಂದ ಶ್ರದ್ಧಾವಂತ ಮನಸ್ಸಿಗೆ ಧಕ್ಕೆ ಆಗಬಾರದು. ಈಗಾಗಲೇ ತನಿಖಾ ತಂಡ ಕೆಲಸ ಮಾಡುತ್ತಿದೆ. ಕ್ಷೇತ್ರದ ಮೇಲೆ ಭಕ್ತಿ ಹೊಂದಿರುವ ಸದ್ಭಕ್ತರು ಶಾಂತಿ ಸಂಯಮದಿಂದ ಇರಬೇಕು

–ಸುತ್ತೂರು ಶ್ರೀಗಳು

## ಆಮದ್‌ಸಾಬ್ ಜಮಾದಾರ್ ಅವರ ಅಪರೂಪದ ಭಕ್ತಿಗೆ ಒಲಿದ ಬೆನಕ!




❑ ಸ್ನೇಹಜೀವಿ ನ್ಯೂಸ್

ಬೆಳಗಾವಿ: ಗಣೇಶ ಇಡೀ ಭಾರತವನ್ನು ಒಟ್ಟುಗೂಡಿಸುವ ಶಕ್ತಿ ಎಂಬುದು ತಿಲಕರಿಗೆ ಗೊತ್ತಿತ್ತು ಎನ್ನಿಸುತ್ತೆ. ಹೀಗಾಗಿ ಸಾರ್ವಜನಿಕ ಗಣೇಶೋತ್ಸವವನ್ನು ಜಾರಿಗೆ ತಂದರು. ಆಗ ಹಿಂದೂ–ಮುಸ್ಲಿಂ ಭೇದವಿಲ್ಲದೇ ಈ ಹಬ್ಬ ಆಚರಿಸಲ್ಪಡುತ್ತಿತ್ತು. ಕಾಲ ಚಕ್ರ ತಿರುಗಿದೆ, ಮನ–ಮನಗಳ ನಡುವೆ ದ್ವೇಷದ ದಳ್ಳುರಿ ನಿಡುಸುಯ್ಯುತ್ತಿದೆ. ಇಂತಹ ಕಾಲಘಟ್ಟದಲ್ಲಿ ಕೂಡ ತಿಲಕರ ಕನಸಿಗೆ ಸಾಕಾರ ರೂಪ ಕೊಟ್ಟಿದ್ದು ಕುಲಗೋಡ್ ಬಸ್ ನಿಲ್ದಾಣದ ಸಾರಿಗೆ ನೌಕರ! ಹೌದು,

ಈ ನೌಕರ ಮಾಡಿದ್ದು ಬಹುದೊಡ್ಡ ಕಾರ್ಯ.ಇಮಾಮ್ ಸಾಬಿಗೂ ಗೋಕುಲಾಷ್ಟಮಿಗೂ ಸಂಬಂಧ ಹುಡುಕುವವರ ನಡುವೆ

ದೇಶಾದ್ಯಂತ ಗಣೇಶ ಚತುರ್ಥಿಯನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿರುವ ಸಂದರ್ಭದಲ್ಲಿ, ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲೂಕಿನ ಕುಲಗೋಡ ಬಸ್ ನಿಲ್ದಾಣದಲ್ಲಿ ದೇಶ ಬೆಸೆಯುವ ಸಾಮರಸ್ಯದ ದೃಶ್ಯ ಕಣ್ಣಿಗೆ ಬಿದ್ದಿದೆ. ಬೆಳಗಾವಿಯ ಕುಲಗೋಡ ಸಾರಿಗೆ ಇಲಾಖೆಯ ನಿಯಂತ್ರಣ ಅಧಿಕಾರಿ ಆಮದ್ ಸಾಬ್ ಜಮಾದಾರ್, ಮುಸ್ಲಿಂ ಸಮುದಾಯದವರಾಗಿದ್ದರೂ ಬಸ್ ನಿಲ್ದಾಣದಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಿ ಎಲ್ಲರ ಮನಗೆದ್ದಿದ್ದಾರೆ. ಮೂರ್ತಿ ಪ್ರತಿಷ್ಠಾಪನೆಯೊಂದಿಗೆ ಶ್ಲೋಕಗಳನ್ನು ಹಾಡಿ ಭಕ್ತರ ಗಮನ ಸೆಳೆದ ಅವರು, ಧಾರ್ಮಿಕ ಅಂತರವಿಲ್ಲದೆ ಮಾನವ ಕುಲ ಒಂದೇ ಎಂಬ ಸಂದೇಶ ಸಾರಿದರು.

### ರಾಷ್ಟ್ರೀಯ ಕ್ರೀಡಾ ದಿನಾಚರಣೆಗೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಶ್ರೀಧರ

# ವ್ಯಕ್ತಿಯ ಪೂರ್ಣ ಪ್ರಮಾಣದ ವಿಕಸನಕ್ಕೆ ಕ್ರೀಡೆಗಳ ಪಾತ್ರ ಮಹತ್ವದ್ದು



❑ ಸ್ನೇಹಜೀವಿ ನ್ಯೂಸ್

ಗದಗ, ಆ. 29: ವ್ಯಕ್ತಿಯ ಪೂರ್ಣ ಪ್ರಮಾಣದ ವಿಕಸವಾಗಬೇಕಾದರೆ ಕ್ರೀಡೆಗಳ ಪಾತ್ರ ಮಹತ್ವದ್ದಾಗಿದೆ. ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಸದೃಢತೆಗೆ ಕ್ರೀಡೆ0ಯಲ್ಲಿ ತೊಡಗುವುದು ಅವಶ್ಯವಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಎಸ್.ಶ್ರೀಧರ್ ತಿಳಿಸಿದರು.

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾ0ಯತ್, 0ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಗದಗ ಇವರ ಸಹ0ಯೋಗದಲ್ಲಿ ಮೇಜರ್ ಧ್ಯಾನಚಂದರವರ ಜನ್ಮದಿನದ ಅಂಗವಾಗಿ ಶುಕ್ರವಾರ ಗದಗ ಬೆಟಗೇರಿಯ ಮಹಾತ್ಮಾ ಗಾಂಧಿ ಕ್ರೀಡಾಂಗಣದಲ್ಲಿ ರಾಷ್ಟ್ರೀ0ಯ ಕ್ರೀಡಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕದಲ್ಲಿ ಹಾಕಿ ಎಂದರೆ ಮೊದಲ ನೆನಪಾಗುವುದು ಕೊಡಗು ನಂತರ ಗದಗ ಜಿಲ್ಲೆಯಾಗಿದೆ. ಹಾಕಿ ಕ್ರೀಡೆಗೆ ಗದಗ ಜಿಲ್ಲೆಯ ಕೊಡಗೆ ಅಪಾರವಾಗಿದೆ. ಕ್ರೀಡಾಪಟುಗಳು ಹಾಕಿ ಗ್ರೌಂಡ್‌ದ ಸದುಪಯೋಗ ಪಡೆದುಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ನುಡಿದರು.

0ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಶರಣು ಗೋಗೇರಿ ಸರ್ವ-ರಿಗೂ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ ಹಾಕಿ ಕ್ರೀಡೆ ಉತ್ತೇಜಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಗದಗ ಜಿಲ್ಲೆಯ ಹಾಕಿ ಕ್ರೀಡಾಪಟುಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಮಿಂಚಿ ಪ್ರಶಸ್ತಿ ಪಡೆದಿದ್ದಾರೆ. ಹಾಕಿ, ಕುಸ್ತಿ ಮತ್ತು ಸೈಕ್ಲಿಂಗ್ ಪಂದ್ಯಾವಳಿಗಳು ಮೂರು ದಿನಗಳ ಕಾಲ ನಡೆ0ಯಲಿವೆ. ಹಾಕಿ ಪಂದ್ಯಾವಳಿ ಅಗಸ್ಟ 29 ರಂದು ಶುಕ್ರವಾರ ಮಹಾತ್ಮ ಗಾಂಧಿ ಹಾಕಿ ಕ್ರೀಡಾಂಗಣ ಗದಗ ಬೆಟಗೇರಿಯಲ್ಲಿ 4 ತಂಡಗಳಿಂದ ಮೂರು ಪಂದ್ಯಗಳು ನಡೆ0ಯಲಿವೆ.

ಕುಸ್ತಿ ಪಂದ್ಯಾವಳಿಗಳು ಅಗಸ್ಟ 30 ರಂದು ಶನಿವಾರ ಬೆಳಗ್ಗೆ 10.30 ಗಂಟೆಗೆ ಸ್ಥಳ ಕೆ ಎಚ್ ಪಾಟೀಲ್ ಜಿಲ್ಲಾ ಕ್ರೀಡಾಂಗಣದ ಕುಸ್ತಿ ಮನೆ ಗದಗದಲ್ಲಿ ನಡೆ0ಯಲಿದೆ. ಸೈಕ್ಲಿಂಗ್ ಜಾಥಾವು ದಿನಾಂಕ 31-8-2025ರ ಬೆಳಿಗ್ಗೆ 10:30 ಗಂಟೆಗೆ ನಗರದ ಕೆ ಎಚ್ ಪಾಟೀಲ್ ಜಿಲ್ಲಾ ಕ್ರೀಡಾಂಗಣದಿಂದ ಶ್ರೀ ಬಸವೇಶ್ವರ ಮೂರ್ತಿಯವರೆಗೆ ಜರುಗಲಿದೆ ಎಂದು ತಿಳಿಸಿದರು.

ಗದಗ ಬೆಟಗೇರಿಯ ಶ್ರೀ ಹನುಮಾನ್ ಬ್ಲೇಸ್ಸಿಂಗ್ ಕ್ಲಬ್ ಅಧ್ಯಕ್ಷರು ಹಾಗೂ ಸರ್ವ ಪದಾಧಿಕಾರಿಗಳು, ಸೈಕ್ಲಿಂಗ್ ಮತ್ತು ಕುಸ್ತಿ ಅಸೋಸಿಯೇಷನ್ , ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಅಧ್ಯಕ್ಷರು , ಪದಾಧಿಕಾ-ರಿಗಳು ಉಪಸ್ಥಿತರಿದ್ದರು.

ಕ್ರೀಡಾ ವಸತಿನಿಲ0ಯದ ಕ್ರೀಡಾಪಟುಗಳು ಪ್ರಾರ್ಥಿಸಿದರು. ಪ್ರಾಧ್ಯಾಪಕರಾದ ಬಾಹುಬಲಿ ಜೈನರ್ ನಿರೂಪಿಸಿದರು. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಅಕ್ಬರ್‌ಸಾಬ್ ಬಬರ್ಜಿ, ನಗರಸಭೆ ಸದಸ್ಯರಾದ ಸುರೇಶ ಕಟ್ಟಿಮನಿ, ವೈ ಜಿ ಗಡಾದ, ಕೃಷ್ಣಪ್ಪ ಬಾಗಲಕೋಟೆ, ಹನುಮಂತಪ್ಪ ವೀರಾಪುರ್, ಚಂದ್ರು ಚೌಹಾನ್, ದೀಪಕ್ ಗಾಗಡೇ, ಪ್ರವೀಣ್ ಚಪ್ಪರಮನಿ, ಮಂಜುನಾಥ್ ಬಾಗಲಕೋಟಿ, ವಾಸು ಕಲ್ಕಂಬಿ, 0ಯುವಜನ ಸಬಲೀಕರಣ ಕ್ರೀಡಾ ಇಲಾಖೆಯ ಅಧೀಕ್ಷಕ ಜಗದೀಶ್ ಹೊಳ್ಳಟ್ಟಿ ಇತರರು ಹಾಜರಿದ್ದರು.

# ಪಟಾಕಿ ಅಂಗಡಿಗಳ ಸ್ಥಳಾಂತರಕ್ಕೆ ಆದೇಶ

❑ ಸ್ನೇಹಜೀವಿ ನ್ಯೂಸ್

ಗದಗ, ಆ. 29 : ಗಣೇಶ ಚತುರ್ಥಿ ಹಾಗೂ ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಗದಗ ಜಿಲ್ಲೆಯ ಅಧಿಕೃತ ಲೈಸನ್ಸ್ ಪಡೆದುಕೊಂಡು ಕ್ರಮಬದ್ಧವಾಗಿ ನವೀಕರಣವಾಗಿರುವ ಪಟಾಕಿ ಲೈಸನ್ಸ್‌ದಾರರ ಅಂಗಡಿಗಳನ್ನು ಗಣೇಶ ಚತುರ್ಥಿಯ ಪ್ರಯುಕ್ತ ಅಗಸ್ಟ 27 ರಿಂದ ಸೆಪ್ಟೆಂಬರ್ 7 ರವರೆಗೆ ಮತ್ತು ದೀಪಾವಳಿ ಹಬ್ಬದ ಪ್ರಯುಕ್ತ ಅಕ್ಟೋಬರ್ 19 ರಿಂದ 23 ರವರೆಗೆ ಗದಗ ಜಿಲ್ಲೆಯ ನಗರ/ ಪಟ್ಟಣ/ ಗ್ರಾಮೀಣ ಪ್ರದೇಶಗಳ ಕೆಳಕಾಣಿಸಿದ ತೆರೆದ ಸ್ಥಳಗಳಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ದಾಸ್ತಾನು ಮಾಡಿ ಮಾರಾಟ ಮಾಡುವ ಷರತ್ತಿಗೊಳಪಟ್ಟು ತಾತ್ಕಾಲಿಕವಾಗಿ ಸ್ಥಳಾಂತರಿಸಲು ಆದೇಶಿಸಲಾಗಿದೆ. ಅನಧಿಕೃತ ಪಟಾಕಿ ಅಂಗಡಿಗಳಿಗೆ ವ್ಯಾಪಾರ ಮಾಡುವುದನ್ನು ನಿರ್ಬಂಧಿಸಿದೆ.

ಲಕ್ಷ್ಮೇಶ್ವರ ತಾಲೂಕಿನ ಲಕ್ಷ್ಮೇಶ್ವರದ ಉಮಾ ಮಹಾವಿದ್ಯಾಲಯದ ಕ್ರೀಡಾಂಗಣ, ಶಿಗ್ಲಿಯ ಹೊಸ ಬಸ್ ಸ್ಟ್ಯಾಂಡ್ ಹತ್ತಿರ ಬಯಲು ಜಾಗೆ ; ಶಿರಹಟ್ಟಿ ತಾಲೂಕಿನಲ್ಲಿ ಶಿರಹಟ್ಟಿಯ ಎಫ್.ಎಂ.ಡಬಾಲಿ ಹೈಸ್ಕೂಲ ಮೈದಾನ ಹಾಗೂ ಬೆಳ್ಳಟ್ಟಿಯ ಶ್ರೀ ಯೋಗಿ ವೇಮನ ಪ್ರೌಢಶಾಲೆ ಮೈದಾನ: ಮುಂಡರಗಿ ತಾಲೂಕಿನಲ್ಲಿ ಮುಂಡರಗಿ ತಾಲೂಕು ಕ್ರೀಡಾಂಗಣ; ರೋಣ ತಾಲೂಕಿನಲ್ಲಿ ರೋಣದ ಜಕ್ಕಲಿ ರಸ್ತೆಯಲ್ಲಿ ಬರುವ ಸೊಸೈಟಿಯ ಬಯಲು ಜಾಗೆ ಹಾಗೂ ಹೊಳೆಆಲೂರದ ಎ.ಪಿ.ಎಂ.ಸಿ. ಬಯಲು ಜಾಗೆ ಹೊಳೆಆಲೂರ ; ಗಜೇಂದ್ರಗಡ ತಾಲೂಕಿನಲ್ಲಿ ಗಜೇಂದ್ರಗಡದ ಶ್ರೀ ಸಂತೋಷ ತಂದೆ ಶ್ಯಾಮಸುಂದರ ಮಂತ್ರಿ ಇವರ ಖುಲ್ಲಾ ಜಾಗೆ , ನರೇಗಲ್‌ದ ಎ.ಪಿ.ಎಂ.ಸಿ. ಗೌಡಾನ್ ಹತ್ತಿರ ಬಯಲು ಜಾಗೆ; ನರಗುಂದ ತಾಲೂಕಿನಲ್ಲಿ ನರಗುಂದ ದಂಡಾಪೂರದ ಶ್ರೀರಾಮ ಮಂದಿರದ ಪಕ್ಕ ಇರುವ ಸರ್ಕಾರಿ ಜಾಗೆ ; ಗದಗ ತಾಲೂಕಿನಲ್ಲಿ ವಿ.ಡಿ.ಎಸ್.ಟಿ.ಕಾಲೇಜು ಮೈದಾನ ಹಾಗೂ ಮುಳಗುಂದದ ಎಸ್.ಜೆ.ಜೆ.ಎಂ.ಸಂ.ಪದವಿ ಪೂರ್ವ ಕಾಲೇಜು ಮೈದಾನ ಈ ಸ್ಥಳಗಳಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ದಾಸ್ತಾನು ಮಾಡಿ ಮಾರಾಟ ಮಾಡುವ ಷರತ್ತಿಗೊಳಪಟ್ಟು ತಾತ್ಕಾಲಿಕವಾಗಿ ಸ್ಥಳಾಂತರಿಸಲು ಆದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಅರ್ಜಿ ಆಹ್ವಾನ

❑ ಸ್ನೇಹಜೀವಿ ನ್ಯೂಸ್

ಗದಗ, ಆ. 29 : ಸರ್ಕಾರದ ಆದೇಶದನ್ವಯ 2024-25 ನೇ ಸಾಲಿನಲ್ಲಿ ಪ್ರವಾಸೋದ್ಯಮ/ ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಪರಿಶಿಷ್ಟ ಜಾತಿಗೆ ಸೇರಿದ 292 ಅಭ್ಯರ್ಥಿಗಳಿಗೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 162 ಅಭ್ಯರ್ಥಿಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆತಿಥ್ಯ ಕ್ಷೇತ್ರದ ಸಂಸ್ಥೆಗಳಾದ ಫುಡ್ ಕ್ರಾಫ್ಟ್ ಇನಸ್ಟಿಟ್ಯೂಟ್ (ಎಫ್.ಸಿ.ಐ) ಮೈಸೂರು ಹಾಗೂ ಇನ್ಸಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್ ಮೆಂಟ್ (ಐಎಚ್‌ಎಂ) ಅವರ ಮೂಲಕ ಸ್ಟೈಫಂಡ್, ವಸತಿ, ಊಟೋಪಚಾರ, ಯೂನಿಫಾರಂ ಸಹಿತ ತರಬೇತಿ ಕಾರ್ಯಕ್ರಮವನ್ನು ಜಾ-ರಿಗೊಳಿಸಲು ಉದ್ದೇಶಿಸಲಾಗಿದೆ.

ಫುಡ್ ಮತ್ತು ಬೆವರೇಜ್ ಸರ್ವಿಸ್ ಸ್ಟೀವರ್ಡ, ರೂಂ ಅಟೆಂಡೆಂಟ್, ಫ್ರಂಟ ಆಫೀಸ್ ಅಸೋಸಿಯೇಟ್, ಮಲ್ಟಿ ಕ್ಯೂಸಿನ್ ಕುಕ್ ತರಬೇತಿಗಳನ್ನು ಪಡೆಯಲು ಅರ್ಜಿಗಳನ್ನು ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಗದಗ ಕಚೇ-ರಿಯಲ್ಲಿ ಅರ್ಜಿ ವಿತರಿಸಲಾಗುವುದು. ಸದರಿ ತರಬೇತಿ ಪಡೆಯಲು ಆಸಕ್ತಿ ಇರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅರ್ಜಿಗಳನ್ನು ಸೆಪ್ಟೆಂಬರ 15 ರೊಳಗೆ ಸಲ್ಲಿಸಬಹುದಾಗಿದೆ. ತರಬೇತಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಎ.ಸಿ. ಕಚೇರಿ ಕಟ್ಟಡ, ಗದಗ ಜಿಲ್ಲೆ -582 103 ಇವನರನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಕಚೇರಿಯ ದೂರವಾಣಿ ಸಂಖ್ಯೆ 08372-233017 ಮೂಲಕ ಪಡೆಯಬಹುದಾಗಿದೆ.

## ವಿಶ್ವಕರ್ಮ ಜಯಂತಿ ಪೂರ್ವಭಾವಿ ಸಭೆ

❑ ಸ್ನೇಹಜೀವಿ ನ್ಯೂಸ್

ಗದಗ, ಆ. 29 :ಸರ್ಕಾರದ ಆದೇಶದನ್ವಯ ಈ ವರ್ಷವು ಸೆಪ್ಟೆಂಬರ್ 17 ರಂದು ಆಚರಿಸಲಾಗುವ ಭಗವಾನ್ ಶ್ರೀ ವಿಶ್ವಕರ್ಮ ಜಯಂತಿ ನಿಮಿತ್ಯ ಸೆಪ್ಟೆಂಬರ್ 2 ರಂದು ಮಂಗಳವಾರ ಮಧ್ಯಾಹ್ನ: 12 ಗಂಟೆಗೆ ಅಪರ ಜಿಲ್ಲಾಧಿಕಾರಿಗಳು, ಗದಗ ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ.

### ಕೇರಳಕ್ಕೆ ತೆರಳಿದ ಬೆಟಗೇರಿ ದತ್ತು ಕೇಂದ್ರದ ಮಗು

# ಮಕ್ಕಳಿಲ್ಲದ ದಂಪತಿಗೆ ಮಗು ಹಸ್ತಾಂತರ ಪುಣ್ಯದ ಕಾರ್ಯ




❑ ಸ್ನೇಹಜೀವಿ ನ್ಯೂಸ್

ಗದಗ, ಆ. 29 : ಮಕ್ಕಳಿಲ್ಲದ ದಂಪತಿಗೆ ಮಗುವೊಂದನ್ನು ಹಸ್ತಾಂತರಿಸುವದು ಪುಣ್ಯದ ಕಾರ್ಯ. ಹೃದಯಸ್ಪರ್ಶಿ ಹಾಗೂ ಭಾವುಕತನವನ್ನುಂಟು ಮಾಡುವ ಈ ಸನ್ನಿವೇಶ ಮಾನವೀಯ ಸಂಬಂಧವನ್ನು ಬೆಸೆಯುವಂತದ್ದು ಎಂದು ನಗರದ ಬಾಲವಿನಾಯಕ ವಿದ್ಯಾನಿಕೇತನ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್.ರವಿ ಹೇಳಿದರು.

ಅವರು ಶುಕ್ರವಾರ ಬೆಟಗೇರಿಯ ಸೇವಾ ಭಾರತಿ ಸಂಸ್ಥೆಯ ಅಮೂಲ್ಯ ವಿಶೇಷ ದತ್ತು ಸ್ವೀಕಾರ ಕೇಂದ್ರದಲ್ಲಿ ಪೋಷಣೆಗೊಂಡ ಮಗುವನ್ನು ಕೇರಳದ ಮಕ್ಕಳಿಲ್ಲದ ದಂಪತಿಗೆ ದತ್ತು ಮಗುವಾಗಿ ಹಸ್ತಾಂತರಿಸಿ ಮಾತನಾಡಿದರು.

ಎಲ್ಲಿಯೂ ಜನಿಸಿದ ಅಲಕ್ಷಿತ ಮಗುವನ್ನು ದತ್ತು ಸ್ವೀಕಾರ ಸಂಸ್ಥೆಯೊಂದು ಸಂರಕ್ಷಿಸಿ ಪೋಷಣೆ ಮಾಡಿ ಕಾನೂನು ಪ್ರಕಾರ ಮಕ್ಕಳಿಲ್ಲದ ದಂಪತಿಗೆ ಹಸ್ತಾಂತರಿಸುವ ಮೂಲಕ ಆ ಮಗುವಿಗೆ ಭವ್ಯ ಭವಿಷ್ಯವನ್ನು ರೂಪಿಸುವದು ಒಂದೆಡೆಯಾದರೆ, ಮಕ್ಕಳಿಲ್ಲದ ಕೊರಗಿನಲ್ಲಿರುವ ದಂಪತಿಯ ಮಡಿಲಿಗೆ ಇಂತಹ ಮಗುವನ್ನು ಹಸ್ತಾಂತರಿಸುವದು ನಿಜಕ್ಕೂ ಪುಣ್ಯಪ್ರಾಪ್ತಿಯ ಮಹತ್ಕಾರ್ಯವಾಗಿದೆ ಎಂದರು.

ದೇವರ ಆಜ್ಞೆ, ಅನುಗ್ರಹದಿಂದಾಗಿ ಈ ದತ್ತು ಕಾರ್ಯ ಪೂರ್ಣಗೊಳ್ಳುವದು. ದೇವರು ವ್ಯಕ್ತಿಯ ಮೂಲಕ ಇಂತಹ ಕಾರ್ಯ ಸಾಕಾರಗೊಳ್ಳಲು ಆಶೀರ್ವದಿಸಿದ ಫಲದಿಂದಾಗಿ ಇಂತಹ ಕಾರ್ಯಗಳು ನಿರ್ವಿಘ್ನವಾಗಿ ಯಶಸ್ವಿಗೊಳ್ಳುವವು ಎಂದರಲ್ಲದೆ ಮಗುವನ್ನು ಪಡೆದ ದಂಪತಿ ಈ ಮಗುವಿಗೆ ಒಳ್ಳೆ ಸಂಸ್ಕಾರ, ಶಿಕ್ಷಣ, ಭವಿಷ್ಯ ನೀಡಲಿ ಎಂದರು.

ಇನ್ನೋರ್ವ ಮುಖ್ಯ ಅತಿಥಿ ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಪ್ರಾಂತ ಪ್ರಚಾರಕರಾದ ನರೇಂದ್ರ ಜೀ ಮಾತನಾಡಿ ಅಮೂಲ್ಯ ದತ್ತು ಕೇಂದ್ರವು ಮನುಷ್ಯತ್ವ ಮತ್ತು ಮಾನವೀಯ ಕಾರ್ಯಕ್ಕೆ ತನ್ನನ್ನು ಸಮರ್ಪಿಸಿಕೊಂಡಿದೆ. ಇದುವರೆಗೂ 68 ಮಕ್ಕಳಿಗೆ ಬದುಕು ನೀಡುವಲ್ಲಿ ತನ್ನದೇ ಆದ ಅಮೂಲ್ಯ ಸೇವೆಯನ್ನು ಸಲ್ಲಿಸುತ್ತ ಮುನ್ನಡೆದಿರುವ ಅಮೂಲ್ಯ ಸಂಸ್ಥೆಯ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದು ಬಣ್ಣಿಸಿದರು.

ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಮಲ್ಲಿಕಾರ್ಜುನ ಬೆಲ್ಲದ ವಹಿಸಿದ್ದರು. ವೇದಿಕೆಯ ಮೇಲೆ ಶ್ರೀಮತಿ ಮಲ್ಲಿಕಾ ಉಪಸ್ಥಿತರಿದ್ದರು. ದತ್ತು ಮಗುವನ್ನು ಪಡೆದುಕೊಂಡ ಕೇರಳದ ಶಿವಕುಮಾರ ದಂಪತಿ ತಮಗೆ ಮಗುವನ್ನು ದತ್ತುವಾಗಿ ನೀಡಿದ್ದು ನಮ್ಮ ಮನೆ-ಮನ ಬೆಳಗಿದಂತಾಗಿದೆ. ಮಗುವಿಗೆ ಉತ್ತಮ ಭವಿಷ್ಯ ನೀಡುವುದಾಗಿ ಹೇಳಿದರಲ್ಲದೆ ಸಂಸ್ಥೆಯ ಕಾರ್ಯವನ್ನು ಬಣ್ಣಿಸಿದರು.

ನಾಗವೇಣಿ ಕಟ್ಟಿಮನಿ ಪ್ರಾರ್ಥಿಸಿದರು, ನರಸಿಂಹ ಕಾಮಾರ್ತಿ ಪರಿಚಯಿಸಿದರು, ಮಂಜುನಾಥ ಚನ್ನಪ್ಪನವರ ಪ್ರಾಸ್ತಾವಿಕವಾಗಿ ಮಾತನಾಡಿದರು, ಅರುಣ ರಾಜಪುರೋಹಿತ ನಿರೂಪಿಸಿದರು ಕೊನೆಗೆ ರಾಜೇಶ ಖಟವಟೆ ವಂದಿಸಿದರು.

ಕಾರ್ಯಕ್ರಮದಲ್ಲಿ ಬಸವರಾಜ ನಾಗಲಾಪೂರ, ಲಲಿತ್ ಜೈನ್, ಗಣೇಶ ಮಾಗುಂಡ, ಬಸವರಾಜ ಪಟ್ಟಣಶೆಟ್ಟಿ, ಪ್ರಮೋದ ಹಿರೇಮಠ, ಶ್ರೀಧರ ಕಾಂಬಳೆ, ಅಭಿಷೇಕ ಮಾಳೋದೆ, ಜ್ಯೋತಿ ಸಂಗಮದ ಸೇರಿದಂತೆ ದತ್ತು ಕೇಂದ್ರದ ಆಯಾಗಳು ಪಾಲ್ಗೊಂಡಿದ್ದರು.

### "ಮೌಲ್ಯ ಶಿಕ್ಷಣ" ಕುರಿತು ತಿಳುವಳಿಕೆ ಕಾರ್ಯಕ್ರಮ

# ವಿದ್ಯಾರ್ಥಿಗಳು ಮೌಲ್ಯಾಧಾರಿತ ಬದುಕು ನಡೆಸಲಿ : ಕವಿತಾ



❑ ಸ್ನೇಹಜೀವಿ ನ್ಯೂಸ್

ಗದಗ, ಆ. 29 : ಶಾಲೆಗಳು ಮಕ್ಕಳಲ್ಲಿ ಮನೋಸ್ಥೈರ್ಯವನ್ನು ಮೂಡಿಸುತ್ತವೆ. ವಿದ್ಯಾರ್ಥಿ ಜೀವನದಲ್ಲಿ ಸಿಗುವಂತಹ ಉತ್ತಮ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ನಿರ್ಧಿಷ್ಟ ಗುರಿಯೊಂದಿಗೆ ಸಾಧನೆಯ ಹಾದಿಯಲ್ಲಿ ಸಾಗಬೇಕು. ತಮ್ಮ ಮುಂದಿನ ಭವಿಷ್ಯಕ್ಕಾಗಿ ಉತ್ತಮ ಜೀವನ ಮೌಲ್ಯಗಳನ್ನು ತಿಳಿದು ಮೌಲ್ಯಾಧಾರಿತ ಬದುಕು ತಮ್ಮದಾಗಿಸಿಕೊಳ್ಳಬೇಕೆಂದು ಸಂಪನ್ಮೂಲ ವ್ಯಕ್ತಿ ಕವಿತಾ ಬೇಲೇರಿ ಹೇಳಿದರು.

ಅವರು ಬೆಟಗೇರಿಯ ಕುರಹಟ್ಟಿಪೇಟೆಯ ಸರ್ಕಾರಿ ಉರ್ದು ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆ ನಂ.1 ರಲ್ಲಿ ಜರುಗಿದ "ಮೌಲ್ಯ ಶಿಕ್ಷಣ" ಕುರಿತು ತಿಳುವಳಿಕೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಶಾಲಾ ಮಕ್ಕಳಿಗೆ ಇಲಾಖೆ ಕೊಡಮಾಡುವ ಶೂ-ಸಾಕ್ಸ್ ವಿತರಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಶಿಕ್ಷಕರು ಹಾಗೂ ಪೋಷಕರೊಂದಿಗೆ ಆತ್ಮೀಯತೆಯ ಸಂಬಂಧ ಹೊಂದಿರಬೇಕು. ಹಿರಿಯರಿಗೆ ಗೌರವ, ಅವರ ಬುದ್ಧಿ ಮಾತುಗಳನ್ನು ಕೇಳಿ ತಿಳಿದುಕೊಳ್ಳುವುದನ್ನು ಮಾಡಬೇಕು. ಕಲಿತ ಶಾಲೆಗೂ ಹೆತ್ತವರಿಗೂ ಕೀರ್ತಿ ತರಬೇಕು. ಸಮಾಜವು ಗುರುತಿಸಿ ಗೌರವಿಸುವಂತಾಗಬೇಕು. ಕಲಿಕೆಯು ನಿರಂತರ ಪ್ರಕ್ರಿಯೆಯಾಗಿದ್ದು, ಉತ್ತಮ ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು ಇದರಿಂದ ಜ್ಞಾನದ ವಿಕಾಸ ಆಗುವುದು ಎಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಶಾಲಾ ಎಸ್.ಡಿ.ಎಂ.ಸಿಯ ಅಧ್ಯಕ್ಷೆ ಅಪ್ಸಾನಾ ಈಟಿ ಮಾತನಾಡಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಅನೇಕ ಸೌಲಭ್ಯಗಳು ಲಭ್ಯವಿದ್ದು, ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಉತ್ತಮ ಗುಣಮಟ್ಟದ ಶಿಕ್ಷಣ, ಉತ್ತಮ ಕಲಿಕೆ ಇಲ್ಲಿ ಕಂಡುಬರುತ್ತದೆ. ನಾವೆಲ್ಲರೂ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸುವ ಮೂಲಕ ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಮುಂದಾಗಬೇಕು ಎಂದರು.

ಶಾಲಾ ಮುಖ್ಯೋಪಾಧ್ಯಾಯಿನಿ ಎಸ್.ಎಂ.ಹುಲ್ಲೂರ ಮಾತನಾಡಿ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಯೇ ನಮ್ಮೆಲ್ಲರ ಗುರಿಯಾಗಿದೆ. ಮಕ್ಕಳು ಇಲ್ಲಿ ಸಿಗುವ ಸೌಲಭ್ಯದೊಂದಿಗೆ ಓದು ಬರಹದಲ್ಲಿ ಯಶಸ್ಸು ಪಡೆಯಬೇಕು. ಸರ್ಕಾರಿ ಶಾಲೆಗಳು ಮಕ್ಕಳ ಅಭಿವೃದ್ಧಿಯ ಕೇಂದ್ರಗಳಾಗಿವೆ ಎಂದರು.

ವಿದ್ಯಾರ್ಥಿಗಳು ಸಾಮೂಹಿಕವಾಗಿ ಪ್ರಾರ್ಥಿಸಿದರು. ಶಿಕ್ಷಕ ಎಂ.ಎಚ್.ಲಕ್ಮಾಪೂರ ಸ್ವಾಗತಿಸಿದರು. ಎಂ.ಎಫ್.ನಾಯಿಕ್ ನಿರೂಪಿಸಿ ವಂದಿಸಿದರು.

### ಗದಗ-ಬೆಟಗೇರಿ ಇನ್ನರ್ ವ್ಹೀಲ್ ಕ್ಲಬ್‌ದಿಂದ

# ವೃದ್ಧಾಶ್ರಮಕ್ಕೆ ಸಾಮಗ್ರಿಗಳ ಕೊಡುಗೆ

❑ ಸ್ನೇಹಜೀವಿ ನ್ಯೂಸ್

ಗದಗ, ಆ. 29 : ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆಗಳ ಕುಸಿತ ಮತ್ತು ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳ ಕೊರತೆಯಿಂದ ವೃದ್ಧಾಶ್ರಮಗಳ ಸಂಖ್ಯೆಯು ಹೆಚ್ಚುತ್ತಿದೆ. ವಯಸ್ಸಿನ ಮುಸ್ಸಂಜೆಯಲ್ಲಿರುವ ವೃದ್ಧರ ಜೀವನಕ್ಕೆ ಜೀವನ ಜ್ಯೋತಿಯಾಗಿ ಸಮಾಜ ಮುಖಿ ಕೆಲಸಕ್ಕೆ ಅಳಿಲು ಸೇವೆ ಸಲ್ಲಿಸುತ್ತಿವೆ, ಇನ್ನರ್ ವ್ಹೀಲ್ ಕ್ಲಬ್ ಗದಗ-ಬೆಟಗೇರಿ ಅವರು ಜೀವನ್ ಜ್ಯೋತಿ ಶಿವರತ್ನ ವೃದ್ಧಾಶ್ರಮ ಬೆಟಗೇರಿ ಸಂಸ್ಥೆಗೆ ಅವಶ್ಯಕತೆ ಇರುವ ಸಾಮಗ್ರಿಗಳನ್ನು ಪೂರೈಕೆ ಮಾಡಿದರು.

ಈ ಸಂದರ್ಭದಲ್ಲಿ ಇನ್ನರ್ ವ್ಹೀಲ್ ಕ್ಲಬ್ಬಿನ ಅಧ್ಯಕ್ಷೆ ಅಶ್ವಿನಿ ಜಗತಾಪ್ ಅವರು ಜೀವನದಲ್ಲಿ ಬಂದ ಸಮಸ್ಯೆಗಳನ್ನು ಎದುರಿಸಿ ಜಯಿಸಬೇಕು. ಅದಕ್ಕೆ ಸಹಕಾರ ನೀಡುತ್ತಿರುವ ಜೀವನ್ ಜ್ಯೋತಿ ಶಿವರತ್ನ ವೃದ್ಧಾಶ್ರಮದ ಅಧ್ಯಕ್ಷ ಶಿವಣ್ಣ ಮುಳುಗುಂದ, ನಾಗರತ್ನಾ ಮುಳುಗುಂದ, ಮೇಲ್ವಿಚಾರಕಿ ಮಂಜುಳಾ ಲಕ್ಕುಂಡಿ ಅವರನ್ನು ಅಭಿನಂದಿಸಿದರು. ಕ್ಲಬ್‌ನ ಕಾರ್ಯದರ್ಶಿ ಶಿವಲೀಲಾ ಅಕ್ಕಿ ಅವರು ಸಂಬಂಧಗಳ ವ್ಯಾಮೋಹವನ್ನು ಬಿಟ್ಟು ನಿಮ್ಮ ವಯಸ್ಕರೊಂದಿಗೆ ನಗುತ್ತಾ ಮುಂದಿನ ಜೀವನವನ್ನು ನೆಮ್ಮದಿಯಿಂದ ಸಾಗಿಸಬೇಕು ಎಂದರು.

ಸುವರ್ಣಾ ಮದ್ರಿಮಠ ಮಾತನಾಡಿ ಇನ್ನೂ ಯಾವುದೇ ರೀತಿಯ ಸಹಕಾರ ಬೇಕಾದರೂ ನಾವು ಮಾಡಲು ಸಿದ್ದರಿದ್ದೇವೆ ಎಂದು ಭರವಸೆ ನೀಡಿದರು. ಶಿವರತ್ನ ವೃದ್ಧಾಶ್ರಮದ ಅಧ್ಯಕ್ಷರಾದ ಶಿವಣ್ಣ ಮುಳುಗುಂದ ಅವರು ಇದು ವೃದ್ಧಾಶ್ರಮವಲ್ಲ ನಮ್ಮ ದೊಡ್ಡ ಪರಿವಾರ ಇವರೆಲ್ಲರೂ ಈ ಪರಿವಾರದ ಹಿರಿಯರು ಎಂದು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದರು.

ಇನ್ನರ್ ವ್ಹೀಲ್ ಕ್ಲಬ್ಬಿನ ವತಿಯಿಂದ ಕೊಡುಗೆಯಾಗಿ ವೆಟ್ ಮಿಕ್ಸರ್ ಗ್ರೈಂಡರ್ ಅನ್ನು ನೀಡಿರುವ ಸುವರ್ಣಾ ಮದ್ರಿಮಠ ಹಾಗೂ ಊಟದ ತಟ್ಟೆಗಳನ್ನು ನೀಡಿರುವ ಸಾಗರಿಕಾ ಅಕ್ಕಿ ಅವರನ್ನು ಅಭಿನಂದಿಸಲಾಯಿತು.

ಮೇಲ್ವಿಚಾರಕರಾದ ಮಂಜುಳಾ ಲಕ್ಕುಂಡಿ ನಿರೂಪಿಸಿದರು ಇನ್ನರ್ ವ್ಹೀಲ್ ಕ್ಲಬ್ಬಿನ ಸಹ ಕಾರ್ಯದರ್ಶಿ ಜಯಶ್ರೀ ಉಗಲಾಟ ವಂದಿಸಿದರು. ಸುಶೀಲಾ ಕೋಟಿ, ಜ್ಯೋತಿ ದಾನಪ್ಪಗೌಡರ, ಸಾಗರಿಕಾ ಅಕ್ಕಿ, ಪವಿತ್ರಾ ಬಿರಾದಾರ, ಶಿಲ್ಪಾ ಅಕ್ಕಿ ಹಾಗೂ ವೀಣಾ ಕಾವೇರಿ ಉಪಸ್ಥಿತರಿದ್ದರು.




# ಶಾಲಾ ಶಿಕ್ಷಣ ಕುರಿತು ಉಪನ್ಯಾಸ ಇಂದು

❑ ಸ್ನೇಹಜೀವಿ ನ್ಯೂಸ್

ಗದಗ, ಆ. 29 : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಗದಗ ಭಾರತ ಜ್ಞಾನ ವಿಜ್ಞಾನ ಸಮಿತಿಯಿಂದ ಆ. 30 ರಂದು ಸಂಜೆ 6-30 ಗಂಟೆಗೆ ಗದುಗಿನ ತೋಂಟದ ಸಿದ್ಧಲಿಂಗಶ್ರೀಗಳ ಕನ್ನಡ ಭವನ, ಕ.ಸಾ.ಪ ಕಾರ್ಯಾಲಯದಲ್ಲಿ ಶಿಕ್ಷಕ ದಿನಾಚರಣೆ ಅಂಗವಾಗಿ ಶೈಕಣಿಕ ಚಿಂತನಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಶಾಲಾ ಶಿಕ್ಷಣ ಪ್ರಸ್ತುತ ಸಂದರ್ಭದ ಸವಾಲುಗಳು ವಿಷಯವಾಗಿ ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಉಪಾಧ್ಯಕ್ಷರು ಹಾಗೂ ಅಧ್ಯಾಪಕರಾದ ಎಫ್.ಸಿ.ಚೇಗರಡ್ಡಿ ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ನಿವೃತ್ತ ಉಪನಿರ್ದೇಶಕರಾದ ಎ.ಎನ್.ನಾಗರಳ್ಳಿ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಆರ್.ಎಸ್.ಬುರಡಿ ಅವರು ಆಗಮಿಸುವರು. ಅಧ್ಯಕ್ಷತೆಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ವಿವೇಕಾನಂದಗೌಡ ಪಾಟೀಲ ವಹಿಸುವರು ಎಂದು ಕಸಾಪ ಪ್ರಕಟಣೆ ತಿಳಿಸಿದೆ.

# ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆ ಕಾರ್ಯಕ್ರಮ

❑ ಸ್ನೇಹಜೀವಿ ನ್ಯೂಸ್

ಗದಗ, ಆ. 26 : ಗದಗ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾಆರೋಗ್ಯ ಮತ್ತುಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾಏಡ್ಸ್‌ತಡೆಗಟ್ಟುವಿಕೆ ಮತ್ತು ನಿಯಂತ್ರಣಘಟಕ ಗದಗ ಹಾಗೂ ಬಸವೇಶ್ವರ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಗದಗ ಇವರುಗಳ ಆಶ್ರಯದಲ್ಲಿ ಗದಗ ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ. ಅರುಂಧತಿ ಕುಲಕರ್ಣಿ ಅವರು ಮಾತನಾಡಿ ಸ್ಪರ್ಧೆಯಲ್ಲಿ ಸೋಲು ಗೆಲವು ಮುಖ್ಯವಲ್ಲ ಭಾಗವಹಿಸುವುದು ಮುಖ್ಯ ಹೆಚ್.ಐ.ವಿ. ಏಡ್ಸ್ ಸಾಮಾನ್ಯ ಖಾಯಿಲೆಯಾಗಿದ್ದು, ಕೋವಿಡ್‌ನಷ್ಟು ಭಯಾನಕ 'ಇಲ್ಲ. ಹಾಗೂ ಇದನ್ನು ಔಷೊಧಪಚಾರವನ್ನು ತೆಗೆದುಕೊಂಡು ಜೀವನಾವಧಿಯನ್ನು ಹೆಚ್ಚಿಗೆ ಮಾಡಬಹುದು ಎಂದು ತಿಳಿಸಿದರು. ಹಾಗೂ ರಕ್ತದಾನದ ಮಹತ್ವವನ್ನು ತಿಳಿಸುತ್ತಾ 18 ವರ್ಷತುಂಬಿದವರು,

ಹಿಮೋಗ್ಲೋಬಿನ್ ಪ್ರಮಾಣ 12.5 ಮಿ.ಗ್ರಾಇರುವವರು ಹಾಗೂ 45 ಕೆ.ಜಿ. ಕ್ಕಿಂತ ಹೆಚ್ಚಿಗೆತೂಕ ಉಳ್ಳವರು, ಯಾರಬೇಕಾದರೂ ರಕ್ತದಾನ ಮಾಡಬಹುದು ಹಾಗೂ ರಕ್ತದಾನ ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ಜ್ಞಾಪಕ ಶಕ್ತಿ ವೃದ್ಧಿಸುತ್ತದೆ. ಹೊಸ ರಕ್ತ ಉತ್ಪಾದನೆಯಾಗಲು ಪ್ರೇರೆಪಣೆ ಕೊಡುತ್ತದೆ. ಮತ್ತು ಕ್ಯಾನ್ಸರ್ ಮತ್ತು ಹೃದಯದ ಖಾಯಿಲೆಯನ್ನು ತಡೆಗಟ್ಟಬಹುದು ಹಾಗಾಗಿ ಪ್ರತಿಯೊಬ್ಬರೂ ಜೀವನದಲ್ಲಿ ಒಂದು ಬಾರಿಯಾದರೂ ರಕ್ತದಾನ ಮಾಡಿ ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರು ಬಿ.ಕೆ.ಲಿಂಬನಗೌಡರ ಮಾತನಾಡಿ ಸ್ಪರ್ಧಾಳುಗಳು ಸ್ಪೂರ್ತಿಯಿಂದ ಭಾಗವಹಿಸಿ ಕಾಲೇಜಿಗೆ ಕೀರ್ತಿತರಬೇಕೆಂದು ಹೇಳಿದರು. ವಿದ್ಯಾರ್ಥಿಜೀವನಅಮೂಲ್ಯವಾದದ್ದು, ವಿದ್ಯಾರ್ಥಿಜೀವನದಲ್ಲಿ ಬರುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ಗುರಿ ಸಾಧಿಸಲು ಹಾಗೂ ವಿದ್ಯಾರ್ಥಿಗಳು ಆರೋಗ್ಯದಿಂದಇರಲುತಿಳಿಸಿದರು.

ಬಸವರಾಜ ಲಾಲಗಟ್ಟಿಸ್ವಾಗತಿಸಿ ಪ್ರಾಸ್ತಾವಿಕವಾಗಿ



ಮಾತನಾಡಿ ರಸಪ್ರಶ್ನೆ ಸ್ಪರ್ಧೆಯ ನಿಯಮಗಳು ಹಾಗೂ ಉದ್ದೇಶಗಳನ್ನು ವಿವರಿಸಿ, ಯುವಜನರಲ್ಲಿರಕ್ತದಾನದ ಹಾಗು ಹೆಚ್.ಐ.ವಿ. ಏಡ್ಸ್ ಬಗ್ಗೆ ಅರಿವು ಮೂಡಿಸುವುದು ಈ ರಸಪ್ರಶ್ನೆ ಸ್ಪರ್ಧೆಯಉದ್ದೇಶವಾಗಿದ್ದು, ಹೆಚ್.ಐ.ವಿ. ಏಡ್ಸ್ ನಿಯಂತ್ರಣ ಸೇವೆ, ಸೌಲಭ್ಯ, ಕಳಂಕ ಮತ್ತುತಾರತಮ್ಯ ಹಾಗೂ ರಾಷ್ಟ್ರೀಯ ಸಹಾಯವಾಣಿ, ಹೆಚ್.ಐ.ವಿ. ಏಡ್ಸ್‌ಕಾಯ್ದೆ 2017 ಹಾಗೂ ರಕ್ತದಾನದ ಬಗ್ಗೆ ರಸಪ್ರಶ್ನೆ ಒಳಗೊಂಡಿರುತ್ತದೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಮೌಲ್ಯ ಮಾಪಕರಾದ ಡಿ.ಡಿ.ಪಿ.ಐಕಛೇ-ರಿಯ ವಿಷಯ ನೀರಿಕ್ಷಣಾಧಿಕಾರಿಗಳಾದ ಶ್ರೀಮತಿ ಲಲಿತಾ ವಂಕ್ಯಾಳ ಹಾಗೂ ಶ್ರೀಆರ್.ಜಿ.ಕೌಲಗೇರಿ ಉಪಸ್ಥಿತರಿದ್ದರು. ಸ್ಪರ್ಧೆಯಲ್ಲಿ ಜಿಲ್ಲೆಯ 29 ಪ್ರೌಢಶಾಲೆಯ ತಂಡಗಳು ಭಾಗವಹಿಸಿದ್ದರು. ರಸಪ್ರಶ್ನೆ ಸ್ಪರ್ಧೆಕಾರ್ಯಕ್ರಮವನ್ನು ಬಸವರಾಜ ಲಾಲಗಟ್ಟಿ ನಿರ್ವಹಿಸಿದರು. ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನುಸರಕಾರಿ ಪ್ರೌಢಶಾಲೆ ಹೊಳೆಮಣ್ಣೂರ ವಿದ್ಯಾರ್ಥಿನಿಯರಾದ ಕು. ಸೃಷ್ಠಿ ತುಳಸಿಗೇರಿ ಹಾಗೂ ಕು. ಶ್ರೇಯಾ ಸುಣಗಾರ, ದ್ವಿತಿಯ ಸ್ಥಾನವನ್ನುಸರಕಾರಿಆದರ್ಶ ವಿದ್ಯಾಲಯಇಟಗಿಯ ಕು. ಸಂಜನಾ ಸುಬೇದಾರ ಮತ್ತು ಕು. ನಿರ್ಮಲಾಕವಲೂರ, ತೃತೀಯ ಸ್ಥಾನವನ್ನುಆದರ್ಶ ವಿದ್ಯಾಲಯ ಕೋರ್ಲಹಳ್ಳಿಯ ಕು. ಸಮೀಕ್ಷಾ ಹಾಗೂ ಮಹಾಲಕ್ಷ್ಮಿಇಲ್ಲೂರಪಡೆದುಕೊಂಡರು. ವಿಜೇತರಾದವರಿಗೆ ಪ್ರಶಸ್ತಿ ಪತ್ರ ಮತ್ತು ಪ್ರಥಮ ರೂ. 6000, ದ್ವಿತೀಯರೂ5000, ತೃತೀಯರೂ. 4000, ರೂಪಾಯಿಗಳನ್ನು ವಿತರಿಸಲಾಯಿತು. ಸಮಾರಂಭದಲ್ಲಿ ಪ್ರೌಢಶಾಲೆಯ ಶಿಕ್ಷಕರು ಸಿಬ್ಬಂದಿ ವರ್ಗ ಹಾಗೂ ಆರೋಗ್ಯಇಲಾಖೆಯಸಿಬ್ಬಂದಿಗಳು ಉಪಸ್ಥಿತ-ರಿದ್ದರು. ಶ್ರೀಮತಿ ತನುಶ್ರೀ ಬದಿ ಪ್ರಾರ್ಥಿಸಿದರು. ಸುನೀಲ ವಂದಿಸಿದರು.

# ಪಿಎಚ್‌ಸಿಗೆ ಮೂಲಭೂತ ಸೌಕರ್ಯ ಒದಗಿಸಿ

❑ ಸ್ನೇಹಜೀವಿ ನ್ಯೂಸ್

ಬೆಟಗೇರಿ 29 : ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಟಗೇರಿಯಲ್ಲಿ ಅನೇಕ ಹಿರಿಯರು, ಯುವಕರು ಪಾಲ್ಗೊಂಡು ಅವರ ಸ್ಮರಣಾರ್ಥವಾಗಿ ಬೆಟಗೇರಿ ರಜಪೂತ ಗಲ್ಲಿಯಲ್ಲಿ ಆಜಾದ ಹಿಂದ ಸೇವಾ ಸಂಘ ನಿರ್ಮಿಸಿದ್ದು ಸ್ಮರಣೆಯ ಆ ಕಟ್ಟಡ ಸದುಪಯೋಗ ವಾಗಬೇಕೆಂದು ಅದರ ಸಮಿತಿಯವರು ಬೆಟಗೇರಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಉಚಿತವಾಗಿ ನೀಡಲಾಗಿತ್ತು ಹಲವಾರು ವರ್ಷಗಳ ನಂತರ ಕಣಗಿನಹಾಳ ರಸ್ತೆಯಲ್ಲಿ ಸ್ವಂತ ಕಟ್ಟಡ ಹೊಂದಿ ಸ್ಥಳಾಂತರಿಸಲಾಯಿತು. ಮತ್ತೇ ಆರೋಗ್ಯ ಇಲಾಖೆ ಒತ್ತಡ ತಂದು ಆ ಕಟ್ಟಡದಲ್ಲಿ ನಗರ ಪ್ರಾಥಮಿಕ ಕೇಂದ್ರ ಪ್ರಾರಂಭಿಸಲಾಯಿತೆಂದು ಬೆಟಗೇರಿ ರೇಲ್ವೆ ಹೋರಾಟ ಸಮಿತಿ ಅಧ್ಯಕ್ಷ ಗಣೇಶಸಿಂಗ್ ಬ್ಯಾಳಿ ಪ್ರಸ್ತಾಪಿಸಿದ್ದಾರೆ.

ಸುಮಾರು ಇಪ್ಪತ್ತೈದು ಮೂವತ್ತು ವರ್ಷಗಳಿಂದ ಈ ಕಟ್ಟಡದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ನಡೆಯುತ್ತಾ ಬರಲಾಗಿದ್ದು ಇಲ್ಲಿಯವರೆಗೆ ಅದಕ್ಕೆ ಇರಬೇಕಾದ ಮೂಲಭೂತ ಸೌಕರ್ಯಗಳಾದ ಶೌಚಾಲಯ, ನೀರಿನ ವ್ಯವಸ್ಥೆ ಆಸನಗಳ ವ್ಯವಸ್ಥೆ ಸೇರಿದಂತೆ ಇನ್ನುಳಿದ ಸೌಲಭ್ಯಗಳು ಪೂರೈಸುವಂತೆ ಆರೋಗ್ಯ ಇಲಾಖೆಗೆ ಅನೇಕ ಬಾರಿ ಒತ್ತಾಯಿಸಿದರೂ ಆ ಕಡೆಗೆ ಗಮನ ಹರಿಸದೇ ಇರುವುದು ದುರಾದೃಷ್ಟ ಎಂದು ಗಣೇಶಸಿಂಗ್ ಬ್ಯಾಳಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರತಿ ದಿನ ನೂರಾರು ರೋಗಿಗಳು ಅದರಲ್ಲೂ ವಿಶೇಷವಾಗಿ ಮಹಿಳೆಯರು, ಹಿರಿಯ ನಾಗರೀಕರು ಬರುತ್ತಾರೆ ಅದಲ್ಲದೆ ಆರೋಗ್ಯ ಕೇಂದ್ರದಲ್ಲಿ ವೈದ್ಯರು ಸೇರಿದಂತೆ ಮಹಿಳಾ ಸಿಬ್ಬಂದಿ ಇರುತ್ತಾರೆ. ಅಲ್ಲಿ ಶೌಚಾಲಯ, ನೀರಿನ ವ್ಯವಸ್ಥೆ ಇರದಿರುವದರಿಂದ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆಂದು ಗಣೇಶಸಿಂಗ್ ಬ್ಯಾಳಿ ಕಳವಳ ವ್ಯಕ್ತಪಡಿಸಿರುತ್ತಾರೆ.

ಇನ್ನಾದರೂ ಆರೋಗ್ಯ ಇಲಾಖೆಯವರು ಈ ಕಡೆಗೆ ಗಮನ ಹರಿಸಿ ರಜಪೂತಗಲ್ಲಿಯಲ್ಲಿರುವ ಆಝಾದ ಹಿಂದ ಸೇವಾ ಸಂಘದ ಕಟ್ಟಡದಲ್ಲಿರುವ ಬೆಟಗೇರಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕೂಡಲೇ ಮೇಲ್ಕಾಣಿಸಿದ ಮೂಲಭೂತ ಸೌಕರ್ಯಗಳು ಪೂರೈಸಬೇಕೆಂದು ಬೆಟಗೇರಿ ರೇಲ್ವೆ ಹೋರಾಟ ಸಮಿತಿ ಪರವಾಗಿ ಸಮಿತಿ ಅಧ್ಯಕ್ಷ ಗಣೇಶಸಿಂಗ್ ಬ್ಯಾಳಿ ಆಗ್ರಹಿಸಿದ್ದಾರೆ. ಇಲ್ಲದಿದ್ದಲ್ಲಿ ಹೋರಾಟ ಅನಿವಾರ್ಯವೆಂದು ಎಚ್ಚರಿಸಿದ್ದಾರೆ.






## ಹೆಸ್ಕಾಂ : ಮಹಿಳೆಯರಿಂದ ಗಜಾನನೋತ್ಸವ

❑ ಸ್ನೇಹಜೀವಿ ನ್ಯೂಸ್

ಗದಗ ಅ. 29: ಸ್ಥಳೀಯ ಹೆಸ್ಕಾಂ ಗದಗ ವಿಭಾಗದ ಗಜಾನನ ಉತ್ಸವ ನಿಮಿತ್ಯ ವಿಭಾಗ ಕಚೇರಿಯ ಮಹಿಳಾ ಮಂಡಳದ ಪದಾಧಿಕಾರಿಗಳು ಹಾಗೂ ಎಲ್ಲಾ ಮಹಿಳಾ ಸಿಬ್ಬಂದಿಗಳಿಂದ ಅದ್ದೂರಿಯಾಗಿ ಪೂಜಾ ಸಮಾರಂಭ ಮಾಡಿ ಗಣೇಶ ಚತುರ್ಥಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದರು.

# ಬೆಟಗೇರಿ : ಬೃಹತ್ ರಕ್ತ ದಾನ ಶಿಬಿರ

❑ ಸ್ನೇಹಜೀವಿ ನ್ಯೂಸ್

ಬೆಟಗೇರಿ, ಆ. 29 : ಪಾಲಾ ಬದಾಮಿ ರೋಡ, ಬೆಟಗೇರಿಯಲ್ಲಿರುವ ಶ್ರೀ ವಿದ್ಯಾರಣ್ಯ ಯುವಕ ಸಂಘದಿಂದ 1976 ಇಸ್ವಿಯಲ್ಲಿ ಸ್ಥಾಪನೆಗೊಂಡು ಶ್ರೀ ಗಜಾನನೋತ್ಸವದ 50ನೇ ವರ್ಷದ ಸುವರ್ಣ ಮಹೋತ್ಸವದ ಅಂಗವಾಗಿ ರಕ್ತ ದಾನ ಶ್ರೇಷ್ಠದಾನ ಮಹಾದಾನ ಎಂಬ ಧ್ಯೇಯದೊಂದಿಗೆ ರಕ್ತ ದಾನ ಶಿಬಿರವು ಯಶಸ್ವಿಯಾಗಿ ಜರುಗಿತು.

ಗದುಗಿನ ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಜಿಲ್ಲಾ ಆಸ್ಪತ್ರೆಯ ರಕ್ತ ನಿಧಿ ಕೇಂದ್ರದ ಡಾ. ಶ್ವೇತಾ ಪಾಟೀಲ, ಡಾ. ನಿಖಿತಾ, ಸಮಾಲೋಚಕರಾದ ಎಸ್.ಬಿ.ಪಾಟೀಲ, ಪೈರೋಜ ಹೊನ್ನಪೂರ, ವಿರೂಪಾಕ್ಷಯ್ಯ ಹಿರೇಮಠ, ಮಲ್ಲೇಶ ಬರಶೆಟ್ಟಿ, ಮಂಜುನಾಥ ಕೆ, ಬಸವರಾಜ ಬಂಗಾರಿ ಆಗಮಿಸಿ, ರಕ್ತದಾನದ ಕುರಿತು ಅರಿವು ಮೂಡಿಸಿ, ರಕ್ತ ದಾನ ಮಾಡಿದರವರಿಗೆ ಪ್ರಮಾಣ ಪತ್ರವನ್ನು ವಿತರಿಸಿದರು.

ನೂರಾರು ಸಂಖ್ಯೆಯಲ್ಲಿ ಎಲ್ಲ ಭಕ್ತಾಧಿಗಳು, ಸಾರ್ವಜನಿಕರು ಹಾಗೂ ರಕ್ತದಾನಿಗಳು ಆಗಮಿಸಿ ರಕ್ತದಾನ ಮಾಡಿದವ-




ರಿಗೆ ಹಾಗೂ ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಜಿಲ್ಲಾ ಆಸ್ಪತ್ರೆಯ ರಕ್ತ ನಿಧಿ ಕೇಂದ್ರದ ಎಲ್ಲ ವೈದ್ಯ-ರಿಗೂ ಹಾಗೂ ಸಿಬ್ಬಂದಿಗಳಿಗೆ ಶ್ರೀ ವಿದ್ಯಾರಣ್ಯ ಯುವಕ ಸಂಘದವರು ಕೃತಜ್ಞತೆಯನ್ನು ಸಲ್ಲಿಸಿದರು.

# ಬಿ.ವಿ.ವಿಯಲ್ಲಿ ರಾಷ್ಟ್ರೀಯ ಕ್ರೀಡಾ ದಿನದ ಆಚರಣೆ




❑ ಸ್ನೇಹಜೀವಿ ನ್ಯೂಸ್

ಗದಗ ಅ. 29: ನಗರದ ಬಾಲ ವಿನಾಯಕ ವಿದ್ಯಾನಿಕೇತನ ಶಾಲೆಯಲ್ಲಿ ರಾಷ್ಟ್ರೀಯ ಕ್ರೀಡಾ ದಿನಕ್ಕೆ ಶಾಲೆಯ ನಿರ್ದೇಶಕರಾದ ಶ್ರೀ ವಿನಾಯಕ ಆರ್, ಪ್ರಾಚಾರ್ಯರಾದ ವಿ.ಎಂ. ಅಡ್ನೂರ್, ಉಪ ಪ್ರಾಚಾರ್ಯರಾದ ಪಿ.ಜಿ. ಬ್ಯಾಳಿ ಅವರು ಭಾರತೀಯ ಸರ್ವಕಾಲಿಕ ಶ್ರೇಷ್ಠ ಆಟಗಾರರಾದ ಮೇಜರ್ ಧ್ಯಾನ್‌ಚಂದ್‌ರವರ ಭಾವ ಚಿತ್ರಕ್ಕೆ ಮಾಲಾರ್ಪಣೆ ಮಾಡಿ ಕ್ರೀಡಾ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶಾಲೆಯ ಸಮಸ್ತ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದರು. ಕ್ರೀಡಾ ಮಂತ್ರಿಯಾದ ಕುಮಾರಿ ಶ್ವೇತಾ ಯಮಗೌಳಿ ಹಾಗೂ ಸಂಗಡಿಗರು ತಂದ ಕ್ರೀಡಾ ಜ್ಯೋತಿಯನ್ನು ತಂದರು.

ಪಂಡಿತ ಪುಟ್ಟರಾಜ ಮ್ಯೂಜಿಕ್ ಕ್ಲಬ್ ವತಿಯಿಂದ ಕುಮಾರಿ ಸಿಂಚನಾ ತಳವಾರ ಹಾಗೂ ಸಂಗಡಿಗರು ಪ್ರಾರ್ಥನಾ ಗೀತೆಯನ್ನು ಹಾಡಿದರು. ಕ್ರೀಡಾ ದಿನವನ್ನು ಕುರಿತು ವಿದ್ಯಾರ್ಥಿನಿಯಾದ ಕುಮಾರಿ ಐಮನ್ ಕೊಪ್ಪಳ ರಾಷ್ಟ್ರೀತ ಕ್ರೀಡಾ ದಿನದ ಬಗ್ಗೆ ಭಾಷಣ ಮಾಡಿದಳು. ಕುಮಾರಿ ದೀಪಾ ವಾರದ್ ನಿರೂಪಿಸಿದಳು.

## ಬಸವೇಶ್ವರ ನಗರದ ಶ್ರೀ ಗಜಾನನೋತ್ಸವ ಸಮಿತಿಯಿಂದ ವಿವಿದ ಕಾರ್ಯಕ್ರಮ



❑ ಸ್ನೇಹಜೀವಿ ನ್ಯೂಸ್


ಗದಗ ಅ. 29: ಸ್ಥಳೀಯ ಬಸವೇಶ್ವರ ನಗರದ ಶ್ರೀ ಗಜಾನನೋತ್ಸವ ವಿವಿಧೋದ್ದೇಶಗಳ ಸೇವಾ ಸಂಘದ ಶ್ರೀ ಗಜಾನನೋತ್ಸವ ಸಮಿತಿಯ 133ನೇ ವರ್ಷದ ಸಾರ್ವಜನಿಕ ಗಣೇಶೋತ್ಸವ ಹಾಗೂ ಮಂಡಳಿಯ 37ನೇ ವರ್ಷದ ಗಣೇಶೋತ್ಸವ ಪ್ರಯುಕ್ತ ಬಣಗಾರ ಸಮಾಜದ ವತಿಯಿಂದ ಪ್ರತಿಭಾ ಪುರಸ್ಕಾರ, ಮದುವೆಯಾಗಿ 50 ವರ್ಷ ಪೂರೈಸಿದ ದಂಪತಿಗಳಿಗೆ ಸನ್ಮಾನ, ಚಿಕ್ಕ ಮಕ್ಕಳಿಗೆ ಡ್ಯಾನ್ಸ್ ಕಾರ್ಯಕ್ರಮ ಜರುಗುವುದೆಂದು ಸಂಚಾಲಕರಾದ ಮಹಾಂತೇಶ ಕಾತರಕಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಾ. ಶಿವರಾತ್ರಿ ಸ್ವಾಮಿಗಳ ಸಂದೇಶ ಸರ್ವಕಾಲಕ್ಕೂ ಪ್ರಸ್ತುತ

❑ ಸ್ನೇಹಜೀವಿ ನ್ಯೂಸ್

ಗದಗ ಅ. 29 : ಲಿಂಗೈಕ್ಯ ಡಾ. ಶಿವರಾತ್ರಿ ಮಹಾಸ್ವಾಮಿಗಳು ಬಾಲ್ಯಾವಧಿಯಿಂದಲೂ ಸಮಾಜಮುಖಿ ಜೀವನ ನಡೆಸುತ್ತ ಲಿಂಗದೀಕ್ಷೆ ನಂತರ ತಮ್ಮನ್ನು ಸಂಪೂರ್ಣ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಅವರಿವರೆನ್ನದೆ ಮಾನವಕುಲದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿ ಇಂದಿಗೂ ಪ್ರಸ್ತುತರಾಗಿದ್ದಾರೆಂದು ನಿವೃತ್ತ ಕನ್ನಡ ಪ್ರಾಧ್ಯಾಪಕಿ ಡಾ. ಶಕುಂತಲಾ ಸಿಂಧೂರ ಹೇಳಿದರು. ಅವರು ಗದಗ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ ಸಂಯುಕ್ತವಾಗಿ ಹುಲಕೋಟಿಯ ಶ್ರೀ ಕೆ.ಎಚ್. ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ ಘಟಕದ ಅಡಿಯಲ್ಲಿ ಹಮ್ಮಿಕೊಂಡಿದ್ದ 'ಲಿಂ. ಡಾ. ಶಿವರಾತ್ರಿ ಸ್ವಾಮಿಗಳ ಜನ್ಮದಿನ' ಕಾರ್ಯಕ್ರಮದಲ್ಲಿ ಮುಖ್ಯ ಉಪನ್ಯಾಸಕರಾಗಿ ಮಾತನಾಡುತ್ತ, ಶ್ರೀಗಳು ಗದಗ ನಗರದಲ್ಲಿ ಶರಣ ಸಾಹಿತ್ಯ ಪರಿಷತ್ತು ಸ್ಥಾಪಿಸುವ ಮೂಲಕ ಜಿಲ್ಲೆಯಲ್ಲಿ ಶರಣರ ಸಂದೇಶಗಳ ಚಿಂತನೆ ಸದಾಕಾಲ ಮುಂದುವರೆಯುವಂತೆ ಮಾಡಿರುವುದು ಶ್ಲಾಘನೀಯ ಕಾರ್ಯವಾಗಿದ್ದು, ಅವರ ಜೀವನ ಮತ್ತು ಲೋಕಕಲ್ಯಾಣ ಕಾರ್ಯಗಳನ್ನು ಸರ್ವಕಾಲಕ್ಕೂ ಪ್ರಸ್ತುತವಾಗಿವೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಗದಗ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎ. ಬಳಿಗೇರ ಪ್ರಸ್ತುತ



ಸಂಧರ್ಭದಲ್ಲಿ ಶರಣರ ನಡೆನುಡಿಯ ಅಗತ್ಯ ಕುರಿತು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಡಾ. ಸುಧಾ ಕೌಜಗೇರಿ ವಿದ್ಯಾರ್ಥಿಗಳು ಶರಣರ ಬದುಕನ್ನು ಅವಲೋಕಿಸಿ ಅವರ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಉಪದೇಶಿಸಿದರು. ಇತಿಹಾಸ ಪ್ರಾಧ್ಯಾಪಕ ಮತ್ತು ಎನ್. ಎಸ್.ಎಸ್. ಘಟಕದ ಸಂಯೋಜಕ ಡಾ. ಅಪ್ಪಣ್ಣ ಹಂಜೆ ಸ್ವಾಗತಿಸಿದರು. ಎಸ್.ಎಂ. ಮರಿಗೌಡ್ರ ನಿರೂಪಿಸಿದರು. ಡಿ.ಎಸ್. ಬಾಪುರಿ ವಂದನಾರ್ಪಣೆಗೈದರು. ಕಾರ್ಯಕ್ರಮದಲ್ಲಿ ಕಾಲೇಜಿನ ಐಕ್ಯೂಎಸಿ ಘಟಕದ ಸಂಚಾಲಕ ಡಾ. ಜಿತೇಂದ್ರ ಜಹಗೀರದಾರ, ಸಾಂಸ್ಕೃತಿಕ ವಿಭಾಗದ ಸಂಚಾಲಕ ರಮೇಶ ಹುಲಕುಂದ, ರಾಜ್ಯಶಾಸ್ತ್ರ ಪ್ರಾಧ್ಯಾಪಕರಾದ ಹುಸೇನಭಾಷಾ ಮತ್ತು ಮಹಾಂತೇಶ, ಇಂಗ್ಲೀಷ ಪ್ರಾಧ್ಯಾಪಕಿ ಸಾವಿತ್ರಿ, ಬಿಎ. ಬಿ.ಎಸ್ಸಿ., ಬಿ.ಕಾಂ. ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಅರ್ಜಿ ಆಹ್ವಾನ

❑ ಸ್ನೇಹಜೀವಿ ನ್ಯೂಸ್

ಗದಗ ಅ. 29: ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆದಿಂದ ವಿಕಲಚೇತನರ ವಿವಾಹ ಪ್ರೋತ್ಸಾಹಧನ ಯೋಜನೆಯಡಿ (ವಿಕಲಚೇತನ ವ್ಯಕ್ತಿಗಳನ್ನು ವಿವಾಹವಾಗುವ ಸಾಮಾನ್ಯ ವ್ಯಕ್ತಿಗಳಿಗೆ ನೀಡುವ ಪ್ರೋತ್ಸಾಹ ಧನ), ನಿರಾಮಯ ಯೋಜನೆಯಡಿ (ಬುದ್ದಿಮಾಂಧ್ಯ, ಸೆರ್‌ಬ್ರಲ್ ಪಾಲ್ಸಿ, ಆಟಿಸಂ & ಬಹುವಿಧ ವಿಕಲಚೇತನರಿಗೆ) ಹಾಗೂ ಶುಲ್ಕ ಮರುಪಾವತಿ ಯೋಜನೆಯಡಿ (ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ, ಭೋದನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಪ್ರವೇಶ ಶುಲ್ಕ, ಗ್ರಂಥಾಲಯ ಶುಲ್ಕಗಳನ್ನು ಸರ್ಕಾರ ನಿಗದಿಪಡಿಸಿರುತ್ತಾರೆ) ಸದರಿ ಯೋಜನೆಗಳಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಯೋಜನೆಗಳಡಿ ಜಿಲ್ಲೆಯ ಅರ್ಹ ವಿಕಲಚೇತನರು ಸೌಲಭ್ಯವನ್ನು ಪಡೆಯಲು ಸೆಪ್ಟೆಂಬರ್ 10 ರಂದು ಸಂಜೆ 5:30 ಗಂಟೆಯೊಳಗಾಗಿ ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಅಗತ್ಯ ದೃಢೀಕೃತ ದಾಖಲಾತಿಗಳೊಂದಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ವಿ.ಆರ್.ಡಬ್ಲ್ಯೂ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿರುವ ಯು. ಆರ್.ಡಬ್ಲ್ಯೂ ಹಾಗೂ ತಾಲ್ಲೂಕ ಪಂಚಾಯತಿಯಲ್ಲಿರುವ ಎಮ್.ಆರ್.ಡಬ್ಲ್ಯೂಗಳಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಮಾಹಿತಿಗಾಗಿ ಜಿಲ್ಲಾ ಸಂಯೋಜಕರು -9606151149 ಹಾಗೂ ಗದಗ ಜಿಲ್ಲೆಯ ತಾಲ್ಲೂಕ ಪಂಚಾಯತಿ ವ್ಯಾಪ್ತಿಯಲ್ಲಿರುವ ಕಾರ್ಯನಿರ್ವಹಿಸುತ್ತಿರುವ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರು ; ತಾಲ್ಲೂಕ ಪಂಚಾಯತ, ಗದಗ - 8867556465, ತಾಲ್ಲೂಕ ಪಂಚಾಯತ, ರೋಣ, ಗಜೇಂದ್ರಗಡ -9741615926 ; ತಾಲ್ಲೂಕ ಪಂಚಾಯತ, ಮುಂಡರಗಿ 9611922445 ; ತಾಲ್ಲೂಕ ಪಂಚಾಯತ, ಶಿರಹಟ್ಟಿ, ಲಕ್ಷ್ಮೇಶ್ವರ -8951128679 ; ತಾಲ್ಲೂಕ ಪಂಚಾಯತ, ನರಗುಂದ -9591679022 ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಗದಗ ಜಿಲ್ಲಾಡಳಿತ ಭವನ, ಗದಗ ಇವರನ್ನು ಸಂಪರ್ಕಿಸಬಹುದು.

# ಹೆಣ್ಣು ಭ್ರೂಣ ಹತ್ಯೆ ದಂಧೆ ಜಿಲ್ಲೆಗೆ ಕಾಲಿಟ್ಟಿದೆಯೇ? : ಪ್ರಕರಣ ದಾಖಲಿಸಲು ಸೂಚನೆ

❑ ಸ್ನೇಹಜೀವಿ ನ್ಯೂಸ್

**ರಾಮನಗರದ': ನೆರೆ ಜಿಲ್ಲೆ ಮಂಡ್ಯದಲ್ಲಿ ಇತ್ತೀಚೆಗೆ ಸದ್ದುಮಾಡಿದ್ದ ಹೆಣ್ಣು ಭ್ರೂಣಹತ್ಯೆ ದಂಧೆ ಬೆಂಗಳೂರು ದಕ್ಷಿಣ (ರಾಮನಗರ)ಕ್ಕೆ ಕಾಲಿರಿಸಿದೆಯಾ? ಎಂಬ ಮಾತು ಕೇಳಿ ಬರುತ್ತಿದೆ.**

ರಾಮನಗರದ ಜಿಲ್ಲಾಆಸ್ಪತ್ರೆಯಲ್ಲಿ ಭ್ರೂಣಲಿಂಗ ಪತ್ತೆ ಮಾಡಲಾಗಿದೆ ಎಂಬ ಗುಮಾನಿಯ ಮೇರೆಗೆ ಜಿಲ್ಲಾ ಆಸ್ಪತ್ರೆ ಅಲ್ಟ್ರಾಸ್ಕ್ಯಾನಿಂಗ್ ಸೆಂಟರ್ ಅನ್ನು ರಾಜ್ಯಮಟ್ಟದ ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ಮತ್ತು ಹತ್ಯೆ ತಡೆ ವಿಭಾಗದ ಅಧಿಕಾರಿಗಳು ಸೀಜ ಮಾಡಿರುವುದು ಇಂತಹದೊಂದು ಪ್ರಕರಣ ನಡೆದ ಬಗ್ಗೆ ಶಂಕೆ ಮೂಡಿಸಿದೆ.

ಪಕ್ಕದ ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿದ್ದ ಹೆಣ್ಣುಭ್ರೂಣ ಪತ್ತೆ ಮತ್ತು ಹತ್ಯೆ ಜಾಲ, ಬೆಂಗಳೂರು ದಕ್ಷಿಣಜಿಲ್ಲೆಯೊಂದಿಗೂ ನಂಟು ಹೊಂದಿರುವು ಬಗ್ಗೆ ಹಲವು ಸುಳಿವು ಈಗಾಗಲೇ ಸಿಕ್ಕಿತ್ತು. ಜಿಲ್ಲೆಯ ಕೆಲ ಮಂದಿ ಸಹ




ಮಂಡ್ಯ ಭ್ರೂಣಹತ್ಯೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದರು. ಇದೀಗ ಜಿಲ್ಲಾಸ್ಪತ್ರೆಯಲ್ಲಿ ಹೆಣ್ಣುಭ್ರೂಣ ಪತ್ತೆಯಾಗಿದೆ ಎಂಬ ಪ್ರಬಲ ಶಂಕೆ ವ್ಯಕ್ತವಾಗಿರುವುದು, ರಾಮನಗರದಲ್ಲಿ ಹೆಣ್ಣುಭ್ರೂಣ ಹತ್ಯೆ ದಂಧೆ ರಕ್ಕೆಬಿಚ್ಚಿದೆಯಾ? ಎಂಬ ಪ್ರಶ್ನೆ ಮೂಡಿಸಿದೆ.

ಮಂಡ್ಯ ರೀತಿಯಲ್ಲೇ ಭ್ರೂಣಹತ್ಯೆ: ಇದೀಗ ಬೆಳಕಿಗೆ ಬಂದಿರುವ ಬೆಂಗಳೂರಿನ ತಾತಗುಣಿಯ ಮಹಿಳೆಯ ಭ್ರೂಣಹತ್ಯೆ ಪ್ರಕರಣದಲ್ಲಿ ರಾಮನಗರದ ಹಳೆಯ ಮನೆಯೊಂದರಲ್ಲಿ ಭ್ರೂಣಹತ್ಯೆ ಮಾಡಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಮಂಡ್ಯದಲ್ಲಿ ಸಹ ಇದೇ ರೀತಿ ಆಲೆಮನೆಯಲ್ಲಿ ಹೆಣ್ಣುಭ್ರೂಣಹತ್ಯೆ ನಡೆಸಲಾಗಿತ್ತು. ಜಿಲ್ಲೆಯಲ್ಲಿ ಹೆಣ್ಣುಭ್ರೂಣ ಹತ್ಯೆಯನ್ನು ಇದೇ ಮಾದರಿಯಲ್ಲಿ ನಡೆಸಲಾಗುತ್ತಿದೆ. ಹೆಣ್ಣುಭ್ರೂಣಹತ್ಯೆಯಲ್ಲಿ ಆರೋಗ್ಯ ಇಲಾಖೆಯ ಕೆಳಹಂತದ ಸಿಬ್ಬಂದಿಯೇ ಶಾಮೀಲಾಗಿರುವ ಮಾಹಿತಿ ಲಭ್ಯವಾಗಿದ್ದು, ಉನ್ನತ ತನಿಖೆಯಿಂದ ಇಡೀ ಪ್ರಕರಣ ಬಯಲಿಗೆ ಬರಬೇಕಿದೆ.

ಸರ್ಕಾರಿ ಆಸ್ಪತ್ರೆಯೇ ಬಳಕೆಯಾಗುತ್ತಿದೆಯೇ?: ಬೆಂಗಳೂರು ದಕ್ಷಿಣ ಜಿಲ್ಲೆ ಸರ್ಕಾರಿ ಆಸ್ಪತ್ರೆಯಲ್ಲಿ ಭ್ರೂಣಲಿಂಗ ಪತ್ತೆ ಮತ್ತು ಹತ್ಯೆಗೆ ಸಂಬಂಧಿಸಿದಂತೆ ಆಗಾಗ್ಗ ಸುದ್ದಿಯಾಗುತ್ತಲೇ ಇದೆ. 2022ರಲ್ಲಿ ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಯಲ್ಲೇ ಮೃತ ಹೆಣ್ಣು ಭ್ರೂಣ ಪತ್ತೆಯಾಗಿತ್ತು.

2023ರಲ್ಲಿ ಮಾಗಡಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಹ ಮೃತ ಹೆಣ್ಣು ಭ್ರೂಣ ಪತ್ತೆಯಾಗಿತ್ತು. 2024ರಲ್ಲಿ ಕನಕಪುರ ತಾಲ್ಲೂಕು ಆಸ್ಪತ್ರೆಯ ಸ್ಕ್ಯಾನಿಂಗ್ ಯಂತ್ರದಲ್ಲಿ ಅಕ್ರಮವಾಗಿ ಸ್ಕ್ಯಾನಿಂಗ್ ಮಾಡುತ್ತಿದ್ದ ಹಿನ್ನೆಲೆಯಲ್ಲಿ ಸ್ಕ್ಯಾನಿಂಗ್ ಯಂತ್ರವನ್ನು ಸೀಜ್ ಮಾಡಲಾಗಿತ್ತು. ಇದೀಗ ಜಿಲ್ಲಾಸ್ಪತ್ರೆಯ ಸ್ಕ್ಯಾನಿಂಗ್ ಯಂತ್ರ ಸೀಜ್ ಮಾಡಲಾಗಿದೆ.

ಡಾ.ಶಶಿಕಲಾಗೆ ಹಿಂದೆ ನೋಟೀಸ್ ನೀಡಲಾಗಿತ್ತು: ಜಿಲ್ಲಾಸ್ಪತ್ರೆಯಲ್ಲಿ ರೇಡಿಯಾಲಜಿಸ್ಟ್ ಆಗಿ ಕೆಲಸ ಮಾಡುತ್ತಿರುವ ಡಾ.ಶಶಿಕಲಾ ಅವರಿಗೆ ಈ ಹಿಂದೆ ಎರಡು ಬಾರಿ ಜಿಲ್ಲಾ ಪಿಸಿ ಅಂಡ್ ಪಿಎಸ್‌ಡಿಸಿ ಸಮಿತಿ ನೋಟೀಸ್ ಜಾರಿ ಮಾಡಿತ್ತು. ಕೆಲ ವರ್ಷಗಳ ಹಿಂದೆ ಚನ್ನಪಟ್ಟಣ ತಾಲ್ಲೂಕು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಹಾಗೂ ರಾಮನಗರ ಜಿಲ್ಲಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಪಿಸಿ ಅಂಡ್ ಪಿಎಸ್‌ಡಿಸಿ ಸಮಿತಿ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಇವರು ಸ್ಕ್ಯಾನಿಂಗ್ ಮಾಡುವಾಗ ಇಲಾಖೆ ನಿಯಮಾನುಸಾರ ಬಾಲಿಕಾ ದಾಖಲೆಗಳನ್ನು ನಮೂದಿಸದಿರುವುದು ಪತ್ತೆಯಾಗಿತ್ತು.

ಈ ಸಂದರ್ಭದಲ್ಲಿ ನೋಟೀಸ್ ಜಾರಿ ಮಾಡಲಾಗಿತ್ತು. ಆದರೆ, ಕೆಲಸದ ಒತ್ತಡ ಹೆಚ್ಚು ಇದೆ ನಾನು ಎಲ್ಲವನ್ನೂ ನಿರ್ವಹಿಸಲು ಸಾಧ್ಯವಾಗುವುದಿಲ್ಲ ಎಂದು ನೋಟೀಸ್‌ಗೆ ಡಾ.ಶಶಿಕಲಾ ಉತ್ತರ ನೀಡಿದ್ದರು ಎಂದು ಆರೋಗ್ಯ ಇಲಾಖೆಯ ಮೂಲಗಳು ಮಾಹಿತಿ ನೀಡಿವೆ.

ಪ್ರಕರಣ ದಾಖಲಿಸಲು ಸೂಚನೆ: ಜಿಲ್ಲಾ ಆಸ್ಪತ್ರೆಯ ಸ್ಕ್ಯಾನಿಂಗ್ ಸೆಂಟರ್ ಸೀಜ್ ಆಗಿರುವ ಹಿನ್ನೆಲೆಯಲ್ಲಿ ಗುರುವಾರ ಜಿಲ್ಲಾ ಭ್ರೂಣಲಿಂಗ ಪತ್ತೆ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಹತ್ಯೆ ತಡೆ ಕಾಯಿದೆಯ ಸಲಹಾಸಮಿತಿ ಜಿಲ್ಲಾಮಟ್ಟದ ತುರ್ತುಸಭೆಯನ್ನು ನಡೆಸಲಾಗಿದ್ದು, ಸಭೆಯಲ್ಲಿ ಜಿಲ್ಲಾ ಆಸ್ಪತ್ರೆಯಲ್ಲಿ ನಡೆದಿರುವ ಪ್ರಕರಣಕ್ಕೆ ಸಂಬಂಧಿಸದಂತೆ ಉನ್ನತಮಟ್ಟದ ತನಿಖೆಗೆ ಜಿಲ್ಲಾಧಿಕಾರಿಗೆ ಶಿಫಾರಸ್ಸು ಮಾಡಲು ನಿರ್ಧರಿಸಲಾಗಿದೆ.

ಸಭೆಯಲ್ಲಿ ಪ್ರಕರಣದ ಬಗ್ಗೆ ತೀವ್ರ ಆಕ್ಷೇಪವ್ಯಕ್ತವಾಗಿದ್ದು, ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲು, ಜಿಲ್ಲಾಧಿಕಾರಿ ಅಧ್ಯಕ್ಷತೆಯ ಸಭೆಯಲ್ಲಿ ಅನುಮತಿ ಪಡೆದು, ಕಾನೂನು ಕ್ರಮ ಕೈಗೊಳ್ಳಲು ತೀರ್ಮಾನಿಸಲಾಗಿರುವುದಾಗಿ ಮಾಹಿತಿ ಲಭ್ಯವಾಗಿದೆ.

ಡಾ.ರಾಜು, ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಈ ಕುರಿತು ಮಾತನಾಡಿ, "ನಗರದಲ್ಲಿ ಇರುವ ಜಿಲ್ಲಾ ಆಸ್ಪತ್ರೆಯ ಸ್ಕ್ಯಾನಿಂಗ್ ಸೆಂಟರ್ ಸೀಜ್ ಮಾಡಿರುವ ಬಗ್ಗೆ ಸಲಹಾ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದೆ. ಈ ಸಂಬಂಧ ಕಾನೂನು ಕ್ರಮಕ್ಕೆ ಹಾಗೂ ತನಿಖೆಯನ್ನು ನಡೆಸುವ ಬಗ್ಗೆ ಜಿಲ್ಲಾಧಿಕಾರಿಗೆ ವರದಿ ನೀಡಲು ಸಭೆಯಲ್ಲಿ ನಿರ್ಣಯಕೈಗೊಳ್ಳಲಾಗಿದ್ದು,

**"ಜಿಲ್ಲಾಧಿಕಾರಿ ಅನುಮತಿ ಪಡೆದು ಮುಂದಿನ ಕ್ರಮ ವಹಿಸಲಾಗುವುದು" ಎಂದು ಹೇಳಿದ್ದಾರೆ.**

# ಏಕರೂಪ ಮಾಸಾಶನ ಪದ್ಧತಿ ಜಾರಿಗೆ ಆಗ್ರಹಿಸಿ ಹಿರಿಯ ಪತ್ರಕರ್ತರ ಸಮಾವೇಶ ಕೇಂದ್ರ ಸರ್ಕಾರಕ್ಕೆ ಒತ್ತಾಯ




❑ ಸ್ನೇಹಜೀವಿ ನ್ಯೂಸ್

**ವಿಜಯಪುರ, ಆ. 30: ದೇಶದ ಎಲ್ಲಾ ರಾಜ್ಯಗಳ ಹಿರಿಯ ನಿವೃತ್ತ ಪತ್ರಕರ್ತ–ರಿಗೆ ಏಕರೂಪದ ಮಾಸಾಶನ ಪದ್ಧತಿಯನ್ನು ರೂಪಿಸಬೇಕೆಂದು ಕೇಂದ್ರ ಸರ್ಕಾರವನ್ನು ರಾಷ್ಟ್ರೀಯ ಹಿರಿಯ ಪತ್ರಕರ್ತರ ಒಕ್ಕೂಟವು ಸಮ್ಮೇಳನದಲ್ಲಿ ಒತ್ತಾಯಿಸಿತು.**

ಆಗಸ್ಟ್ 19, 20 ಹಾಗೂ 21ರಂದು ಕೇರಳ ರಾಜಧಾನಿ ತಿರುವನಂತನಪುರಂ ವಿ ಪ್ರತಾಪ ಚಂದ್ರನ್ ನಗರದಲ್ಲಿ ನಡೆದ ಹಿರಿಯ ಪತ್ರಕರ್ತರ ಪ್ರಪ್ರಥಮ ರಾಷ್ಟ್ರೀಯ ಸಮ್ಮೇಳನದಲ್ಲಿ ಒಕ್ಕೊರಲಿನ ನಿರ್ಣಯ ಅಂಗೀಕರಿಸಲಾಯಿತು.

ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಅತಿ ಹೆಚ್ಚು ಹಿರಿಯ ಪತ್ರಕರ್ತರಿಗೆ ಮಾಶಾಸನ ನೀಡುತ್ತಿರುವ ರಾಜ್ಯ ಎಂಬ ಹೆಗ್ಗಳಿಕೆಗೆ ಕೇರಳ ಪಾತ್ರವಾಗಿದೆ ಎಂದರು.

ಕೇರಳದಲ್ಲಿ 1971ರಲ್ಲಿಯೇ ಹಿರಿಯ ಪತ್ರಕರ್ತರಿಗೆ ಮಾಸಾಶನವನ್ನು ಜಾರಿ ಮಾಡಲಾಯಿತು. ಪ್ರಸ್ತುತ 960 ಪತ್ರಕರ್ತ–ರಿಗೆ ಪ್ರತಿ ತಿಂಗಳು 11000 ಮಾಸಾಶನ ನೀಡುತ್ತಿದ್ದೇವೆ. ಅದನ್ನು 12,000 ರೂ.ಗಳಿಗೆ ಹೆಚ್ಚಿಸುತ್ತೇವೆ ಎಂದು ತಿಳಿಸಿದರು.

"ಭಾರತದಲ್ಲಿ ಪತ್ರಿಕಾ ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ. ಸರ್ಕಾರದ ಕೆಲಸ ಕಾರ್ಯಗಳನ್ನು ಟೀಕೆ ಮಾಡುವ ಪತ್ರಕರ್ತರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಇದು ಸರಿಯಲ್ಲ. ತಮ್ಮ ಸರ್ಕಾರ ಪತ್ರಕರ್ತರ ಹಿತ ರಕ್ಷಣೆಗೆ ಕಟ್ಟಿ ಬದ್ಧವಾಗಿದೆ ಎಂದು ಹೇಳಿದರು.

ಈ ಐತಿಹಾಸಿಕ ಹಾಗೂ ಪ್ರಪ್ರಥಮ ಹಿರಿಯ ಪತ್ರಕರ್ತರ ಸಮಾವೇಶದಲ್ಲಿ 21 ರಾಜ್ಯಗಳಿಂದ 250 ಪತ್ರಕರ್ತರು ಭಾಗವಹಿಸಿ ಹಿರಿಯ ಪತ್ರಕರ್ತರಿಗಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸುದೀರ್ಘವಾಗಿ ಚರ್ಚೆ ನಡೆಸಲಾಯಿತು.

ಹಿರಿಯ ಪತ್ರಕರ್ತರಿಗಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಶ್ರಮಿಸಲು ನಿರ್ಧರಿಸಿತು.

ಕರ್ನಾಟಕದ ಹಿರಿಯ ಪತ್ರಕರ್ತೆ ಕೆ. ಶಾಂತಕುಮಾರಿ ಮಾತನಾಡಿ, ದೇಶದಾದ್ಯಂತ ಕಾಯಾ, ವಾಚಾ, ಮನಸಾ ಸೇವೆ ಸಲ್ಲಿಸಿ, ನಿಧನರಾದ ವಿವಿಧ ರಾಜ್ಯಗಳ ಹಿರಿಯ ಪತ್ರಕರ್ತರ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿದರು. ವಿವಿಧ ರಾಜ್ಯಗಳಿಂದ ಆಗಮಿಸಿದ ಹಿರಿಯ ಪತ್ರಕರ್ತರು ಆಯಾ ರಾಜ್ಯಗಳಲ್ಲಿರುವ ಹಿರಿಯ ಪತ್ರಕರ್ತ–ರಿಗಿರುವ ಸವಲತ್ತುಗಳು ಹಾಗೂ ಅವರು ಎದುರಿಸುತ್ತಿರುವ ಸವಾಲುಗಳು ವಿವಿಧ ರಾಜ್ಯಗಳಲ್ಲಿ ಇರುವ ವಿವಿಧ ರೀತಿಯ ಮಾಸಾಶನಗಳು ಏಕರೂಪದಲ್ಲಿ ಬರುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದರ ಮೂಲಕ ಆಯಾ ರಾಜ್ಯ ಸರ್ಕಾರಗಳಲ್ಲಿ ಇರುವ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸುದೀರ್ಘವಾಗಿ ಚರ್ಚೆ ನಡೆಯಿತು. ಹಿರಿಯ ಪತ್ರಕರ್ತರಿಗೆ ಆರೋಗ್ಯ ವಿಮೆ, ನಿವೃತ್ತಿ ನಂತರ ನಿವೇಶನ ಒದಗಿಸುವುದರ ಕುರಿತು, ಹಿರಿಯ ಪತ್ರಕರ್ತರಿಗೆ ರದ್ದುಪಡಿಸಿರುವ ರೈಲ್ವೆ ಪಾಸುಗಳನ್ನು ಪುನರ್ ಆರಂಭಿಸುವಂತೆ ನಿರ್ಣಯವನ್ನು ಕೈಗೊಳ್ಳಲಾಯಿತು.

ಇದೇ ಸಂದರ್ಭದಲ್ಲಿ 21 ರಾಜ್ಯಗಳಿಂದ ಭಾಗವಹಿಸಿದ ಹಿರಿಯ ಪತ್ರಕರ್ತರ ಪ್ರತಿನಿಧಿಗಳ ಸಮಾವೇಶವನ್ನು ಕೇರಳದ ವಿರೋಧ ಪಕ್ಷದ ನಾಯಕ ವಿ. ಡಿ.ಶಶಿಧರನ್ ಉದ್ಘಾಟಿಸಿದರು.

ಕೇರಳದ ಕೈಗಾರಿಕಾ ಮಂತ್ರಿ ಪಿಕೆ ಕುನ್ನಳ್ಳಿ ಕುಟ್ಟಿ, ಕೇರಳ ಪತ್ರಿಕೆ ಸಂಘದ ಅಧ್ಯಕ್ಷ ಕೆಪಿ ರೆಜಿ ಹಾಗೂ ಜೆ ಅಜಿತಕುಮಾರ್ ಭಾಗವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕೇರಳ ರಾಜ್ಯದ ಆಹಾರ ಸರಬರಾಜು ಮಂತ್ರಿ ಜಿ. ಆರ್. ಅನಿಲ್, ಲೋಕಸಭಾ ಸದಸ್ಯರಾದ ಆಡೂರು ಪ್ರಕಾಶ್, ಶಶಿ ತರೂರ್, ಹಿರಿಯ ಪತ್ರಕರ್ತರ ವೇದಿಕೆ ಕಾರ್ಯದರ್ಶಿ ಕೆಪಿ ವಿಜಯ್ ಕುಮಾರ್, ಕರಿಯಂ ರವಿ ಭಾಗವಹಿಸಿದ್ದರು.

**ರಾಷ್ಟ್ರೀಯ ಸಮಿತಿ ರಚನೆ:**

ಇದೇ ಸಂದರ್ಭದಲ್ಲಿ ಹಿರಿಯ ಪತ್ರಕರ್ತರ ರಾಷ್ಟ್ರೀಯ ಮಂಡಳಿ ರಚಿಸಲಾಯಿತು. ಅಧ್ಯಕ್ಷರಾಗಿ ಸಂದೀಪ್ ದೀಕ್ಷಿತ್ (ದೆಹಲಿ), ಉಪಾಧ್ಯಕ್ಷರಾಗಿ ಆನಂದಂ ಪುಲಿಪಲುಪುಲ (ತೆಲಂಗಾಣ), ಸುಹಾಸಿನಿ ಪ್ರಭು ಗೊಂಕರ್ (ಗೋವಾ), ಡಾ. ಬಿ. ಜನಾರ್ಧನ (ಆಂಧ್ರ ಪ್ರದೇಶ), ಚಂದನ್ ಪ್ರಕಾಶ್ ಭಾರದ್ವಾಜ್ (ಮಧ್ಯಪ್ರದೇಶ), ಪ್ರಧಾನ ಕಾರ್ಯದರ್ಶಿಯಾಗಿ ಎನ್. ಪಿ. ಚೇಕುಟ್ಟಿ,(ಕೇರಳ), ಕೆ. ಶಾಂತಕುಮಾರಿ (ಕರ್ನಾಟಕ), ಕನೂ ನಂದ (ಒರಿಸ್ಸಾ), ಆರ್ ಆರ್. ರಂಗರಾಜನ್,(ತಮಿಳುನಾಡು), ಜೈಪಾಲ್ ಪರಶುರಾಮ್ ಪಾಟೀಲ (ಮಹಾರಾಷ್ಟ್ರ), ಕೋಶಾಧಿಕಾರಿಯಾಗಿ ಕೆ. ಪಿ. ವಿಜಯ್ ಕುಮಾರ್ (ಕೇರಳ), ಕಾರ್ಯಕಾರಿ ಸಮಿತಿ ಸದಸ್ಯರಾಗಿ ಪಿ. ಸಾಂಬ ಸದಾಶಿವ ರೆಡ್ಡಿ (ಕರ್ನಾಟಕ), ಜಾರ್ಜ್ ಕಲ್ಲಿ ವೈಲಿಲ್ (ದೆಹಲಿ), ಎನ್ ನಭ ನಾಯಕ (ಪಶ್ಚಿಮ ಬಂಗಾಳ),. ಹಿಮಾ ಶರ್ಮಾ (ಅಸ್ಸಾಂ), ಅಭಿಜಿತ್ ಸಹಿತೆ (ಬಿಹಾರ), ಅಶ್ವಿನಿ ಕುಮಾರ್ (ಜಮ್ಮು ಮತ್ತು ಕಾಶ್ಮೀರ), ಉಪೇಂದ್ರ ಸಿಂಗ್ ರಾಥೋಡ್ (ರಾಜಸ್ಥಾನ್), ಪ್ರವೀಣ್ ಪಟೇಲ (ಉತ್ತರಖಂಡ), ನುಮವಲ್ಲ ಹೌಸಲ್ (ಜಾರ್ಖಂಡ್), ಪಿ. ಪರಮೇಶ್ವರರಾವ್ (ಆಂಧ್ರ ಪ್ರದೇಶ), ಕೇಂದ್ರ ಸಮಿತಿ ಕೌನ್ಸಿಲ್ ಸದಸ್ಯರಾಗಿ ಕರ್ನಾಟಕದಿಂದ ಜಾಕಿರ ಹುಸೇನ್, (ಬಾಗಲಕೋಟೆ), ರುದ್ರಪ್ಪ ಆಸಂಗಿ (ವಿಜಯಪುರ), ಸುನಿಲ ನಾಟೇಕರ ( ಮೈಸೂರು) ಆಯ್ಕೆಯಾಗಿದ್ದಾರೆ.

# ನದಿಯಲ್ಲಿ ಈಜಿದ ಚಿರತೆಗಳು



❑ ಸ್ನೇಹಜೀವಿ ನ್ಯೂಸ್

ಶಿಯೋಪುರ್,ಆ.29:– ಚಿರತೆಗಳು ನೀರಿನಿಂದ ದೂರವಿರುತ್ತವೆ ಎಂಬ ಸಾಮಾನ್ಯ ನಂಬಿಕೆ ಇದೆ. ಆದರೆ, ಆಫ್ರಿಕಾದಿಂದ ಭಾರತಕ್ಕೆ ತರಲಾದ ಚಿರತೆಗಳು ಈ ನಂಬಿಕೆಯನ್ನು ತೊಡೆದು ಹಾಕುತ್ತಿವೆ. ಕುನೋ ರಾಷ್ಟ್ರೀಯ ಉದ್ಯಾನವನದಲ್ಲಿ ನದಿಯಲ್ಲಿ ಮರಿಗಳು ಈಜುತ್ತಿರುವುದು ಕಂಡುಬಂದಿದೆ. ಚಿರತೆಗಳ ಈ ನಡವಳಿಕೆಯನ್ನು ನೋಡಿ ತಜ್ಞರು ಆಶ್ಚರ್ಯಚಕಿತರಾಗಿದ್ದಾರೆ.

ಚಿರತೆಗಳು ಸಾಮಾನ್ಯವಾಗಿ ನೀರಿನಿಂದ ದೂರವಿರುತ್ತವೆ ಎಂದು ಪ್ರಾಜೆಕ್ಟ್ ಚೀತಾ ತಜ್ಞರು ಮೂರು ವರ್ಷಗಳ ಹಿಂದೆ ಹೇಳಿದ್ದರು ಆದರೆ ಇತ್ತೀಚಿನ ಮಳೆಯ ಸಮಯದಲ್ಲಿ, ಕೆಲವು ಚಿರತೆ ಮರಿಗಳು ಮತ್ತು ಅವುಗಳ ನಮೀಬಿಯಾ ಮೂಲದ ತಾಯಿ ಕುನೋ ನದಿಯನ್ನು ದಾಟಿ ಈಜುತ್ತಿರುವುದು ಕಂಡುಬಂದಿದ್ದು, ಇದು ಬಹುಕಾಲದ ನಂಬಿಕೆಗಳನ್ನು ಮುರಿದಿದೆ. ಕುನೋ ರಾಷ್ಟ್ರೀಯ ಉದ್ಯಾನವನದಲ್ಲಿ ಚಿರತೆಗಳು ಈಜುತ್ತಿರುವ ಘಟನೆ ತಜ್ಞರನ್ನು ಅಚ್ಚ–ರಿಗೊಳಿಸಿದೆ.

ಆಫ್ರಿಕಾದಲ್ಲಿ ಚಿರತೆಗಳು ನೀರಿನಿಂದ ದೂರವಿರುತ್ತವೆ ಎನ್ನಲಾಗಿದೆ ಆದ–ರೆ ಭಾರತದಲ್ಲಿ ಜನಿಸಿದ ಮರಿಗಳು ಈ ಕಲ್ಪನೆಯನ್ನು ತಪ್ಪೆಂದು ಸಾಬೀತುಪಡಿಸಿವೆ. ಅವು ಕುನೋ ಮತ್ತು ಚಂಬಲ್ ನದಿಗಳಲ್ಲಿ ಈಜುವುದನ್ನು ಸಹ ನೋಡಲಾಗಿದೆ.


ಕುನೋ ಮತ್ತು ಚಂಬಲ್ ನದಿಗಳನ್ನು ದಾಟುತ್ತಿರುವುದನ್ನು ಕುನೋದಲ್ಲಿನ ಅಧಿಕಾರಿಗಳು ದೃಢಪಡಿಸಿದ್ದಾರೆ. ಕುನೋ ಯೋಜನೆಯ ಕ್ಷೇತ್ರ ನಿರ್ದೇಶಕ ಉತ್ತಮ್ ಶರ್ಮಾ, ಮರಿಗಳು ಸುಲಭವಾಗಿ ಈಜುವುದನ್ನು ನಾವು ನೋಡಿದ್ದೇವೆ. 'ಜ್ವಾಲಾ' ತನ್ನ ಮರಿಗಳೊಂದಿಗೆ ನಡೆಯುವಾಗ ಕುನೋ ನದಿಯನ್ನು ದಾಟಿದೆ ಎಂದು ನಂಬಲಾಗಿದೆ ಎಂದು ಹೇಳಿದ್ದಾರೆ.

ಈ ತಿಂಗಳು ರಾಜಸ್ಥಾನದ ರಣಥ–'ಂಬೋರ್ ರಾಷ್ಟ್ರೀಯ ಉದ್ಯಾನವನದ ಬಳಿಯಿಂದ ರಕ್ಷಿಸಲ್ಪಟ್ಟ ಜ್ವಾಲಾ, ಕುನೋ ರಾಷ್ಟ್ರೀಯ ಉದ್ಯಾನವನದಿಂದ ದಾರಿ ತಪ್ಪಿ ಚಂಬಲ್ ನದಿಯನ್ನು ಸಹ ಈಜಿದ್ದಳು ಎನ್ನಲಾಗಿದೆ.

ಚಿರತೆಗಳನ್ನು ಬಲವಾದ ಈಜುಗಾರರೆಂದು ಪರಿಗಣಿಸಲಾಗುವುದಿಲ್ಲ. ನಡವಳಿಕೆಯಲ್ಲಿನ ಈ ಬದಲಾವಣೆಯು ತಜ್ಞರನ್ನು ರೋಮಾಂಚನಗೊಳಿಸಿದೆ. ಕುನೊದಲ್ಲಿ, ನದಿಯ ಅಗಲ ಕೇವಲ 200 ಮೀಟರ್ ಆಗಿದೆ ಗಾಂಧಿ ಸಾಗರ್ ಅಭಯಾರಣ್ಯದಲ್ಲಿ ಚಿರತೆಗಳು ಚಂಬಲ್ ಅನ್ನು ದಾಟಲು ಪ್ರಯತ್ನಿಸುವ ಸಾಧ್ಯತೆಯಿದೆ, ಆದ್ದರಿಂದ ನಾವು ಈಗ ಜಾಗರೂಕರಾಗಿರಬೇಕು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

# ಅಮಿತ್ ಶಾ ತಲೆ ಕತ್ತರಿಸಿ ಮೇಜಿನ ಮೇಲೆ ಇಡಬೇಕು

**ಪತ್ರಕರ್ತರು ಸಂಸದೆ ಮೊಯಿತ್ರಾಗೆ ರಾಜ್ಯದಲ್ಲಿ ಅಕ್ರಮ ಒಳನುಸುಳುವಿಕೆಯ ಬಗ್ಗೆ ಪ್ರಶ್ನೆ ಕೇಳಿದ್ದು, ಈ ವೇಳೆ ಪ್ರತಿಕ್ರಿಯಿಸಿದ ತೃಣಮೂಲ ಸಂಸದೆ ಮಹುವಾ ಮೊಯಿತ್ರಾ, ಅಮಿತ್ ಶಾ ಅವರ ತಲೆ ಕತ್ತರಿಸಿ ಟೇಬಲ್ ಮೇಲೆ ಇಡಬೇಕು ಎಂದು ನಾಲಿಗೆ ಹರಿಬಿಟ್ಟಿದ್ದಾರೆ**




ನವದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಬಗ್ಗೆ ತೃಣಮೂಲ ಕಾಂಗ್ರೆಸ್ ಸಂಸದೆ ಮಹುವಾ ಮೊಯಿತ್ರಾನಾಲಿಗೆ ಹರಿಬಿಟ್ಟಿದ್ದಾರೆ.

ಪಶ್ಚಿಮ ಬಂಗಾಳದ ನಾಡಿಯಾ ಜಿಲ್ಲೆಯಲ್ಲಿ ಪತ್ರಕರ್ತರು ಸಂಸದೆ ಮೊಯಿತ್ರಾಗೆ ರಾಜ್ಯದಲ್ಲಿ ಅಕ್ರಮ ಒಳನುಸುಳುವಿಕೆಯ ಬಗ್ಗೆ ಪ್ರಶ್ನೆ ಕೇಳಿದ್ದು, ಈ ವೇಳೆ ಪ್ರತಿಕ್ರಿಯಿಸಿದ ತೃಣಮೂಲ ಸಂಸದೆ ಮಹುವಾ ಮೊಯಿತ್ರಾ, ಅಮಿತ್ ಶಾ ಅವರ ತಲೆ ಕತ್ತರಿಸಿ ಟೇಬಲ್ ಮೇಲೆ ಇಡಬೇಕು ಎಂದು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಸುದ್ದಿಗಾರರೊಂದಿಗೆ ಮಾತನಾಡುತ್ತಾ, 'ಭಾರತದ ಗಡಿಗಳನ್ನು ರಕ್ಷಿಸಲು ಯಾರೂ ಇಲ್ಲದಿದ್ದರೆ, ಇತರ ದೇಶಗಳ ಜನರು ಪ್ರತಿದಿನ ನೂರಾರು, ಸಾವಿರಾರು ಮತ್ತು ಲಕ್ಷಗಳಲ್ಲಿ ಒಳ ನುಸುಳುತ್ತಿದ್ದರೆ ಮತ್ತು ನಮ್ಮ ತಾಯಂದಿರು ಮತ್ತು ಸಹೋದರಿಯರ ಮೇಲೆ ಕಣ್ಣಿಟ್ಟು, ನಮ್ಮ ಭೂಮಿಯನ್ನು ಕಸಿದುಕೊಳ್ಳುತ್ತಿದ್ದರೆ, ಮೊದಲು ನೀವು ಅಮಿತ್ ಶಾ ಅವರ ತಲೆಯನ್ನು ಕತ್ತರಿಸಿ ಮೇಜಿನ ಮೇಲೆ ಇಡಬೇಕು. ಗೃಹ ಸಚಿವರು ಮತ್ತು ಗೃಹ ಸಚಿವಾಲಯವು ಭಾರತದ ಗಡಿಗಳನ್ನು ರಕ್ಷಿಸಲು ಸಾಧ್ಯವಾಗದಿದ್ದರೆ ಮತ್ತು ಹೊರಗಿನಿಂದ ಬಂದ ಜನರು ನಮ್ಮ ತಾಯಂದಿರು ಮತ್ತು ಸಹೋದ–ರಿಯರ ಮೇಲೆ ಕಣ್ಣಿಟ್ಟು ನಮ್ಮ ಭೂಮಿಯನ್ನು ಕಸಿದುಕೊಳ್ಳುತ್ತಿದ್ದಾರೆ ಎಂದು ಪ್ರಧಾನಿಯೇ ಹೇಳುತ್ತಿದ್ದರೆ,

**ಇದು ಯಾರ ತಪ್ಪು? ಇದು ನಮ್ಮ ತಪ್ಪೋ ಅಥವಾ ನಿಮ್ಮ ತಪ್ಪೋ? ಇಲ್ಲಿ ಬಿಎಸ್‌ಎಫ್ ಇದೆ. ನಾವು ಕೂಡ ಅವರ ಭಯದಲ್ಲಿ ಬದುಕುತ್ತೇವೆ. ಬಾಂಗ್ಲಾದೇಶ ನಮ್ಮ ಸ್ನೇಹಿತ ರಾಷ್ಟ್ರವಾಗಿದೆ, ಆದ–'ರೆ ನಿಮ್ಮ ಕಾರಣದಿಂದಾಗಿ, ಕಳೆದ ಹಲವಾರು ವರ್ಷಗಳಿಂದ ಈ ಪರಿಸ್ಥಿತಿ ಬದಲಾಗಿದೆ' ಎಂದು ಹೇಳಿದರು.**

# ಪತ್ನಿ ಕೊಂದು ದೇಹ ಎರಡು ತುಂಡಾಗಿ ಕತ್ತ-ರಿಸಿದ ಪತಿ



❑ ಸ್ನೇಹಜೀವಿ ನ್ಯೂಸ್

ಸಿಂದಗಿ,ಆ.29–ತಾಲೂಕಿನ ಗಣೆಹಾರ ಗ್ರಾಮದಲ್ಲಿ ಪತ್ನಿಯನ್ನು ಪತಿಯೇ ಭೀಕರವಾಗಿ ಕೊಲೆ ಮಾಡಿದ ಹೃದಯ ವಿದ್ರಾವಕ ಘಟನೆ ಮಂಗಳವಾರ ನಡೆದಿದೆ.

ನೀಲಮ್ಮ ಪರಮಣ್ಣ ಆನಗೊಂಡ (45) ಕೊಲೆಯಾದ ಮಹಿಳೆ.

ನೀಲಮ್ಮ ಅವರನ್ನು ಅವಳ ಗಂಡ ಪರಮಣ್ಣ ಪುಸಲಾಯಿಸಿ ಹೊಲಕ್ಕೆ ಕರೆದುಕೊಂಡು ಹೋಗಿ ಹರಿತವಾದ ಆಯುಧದಿಂದ ಹೊಡೆದು ಕೊಲೆ ಮಾಡಿ ದೇಹವನ್ನು ಎರಡು ಭಾಗಗಳಾಗಿ ಕತ್ತರಿಸಿ ಬಾವಿಯಲ್ಲಿ ಎಸೆದಿದ್ದಾನೆ.

ಆರೋಪಿ ಪರಮಣ್ಣ ಪರಾರಿಯಾಗಿದ್ದು, ಆತನ ಬಂಧನಕ್ಕೆ ಬಲೆ ಬೀಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕೊಲೆ ಆರೋಪಿಗೆ ಇಬ್ಬರು ಮಕ್ಕಳಿದ್ದು, ಹಿರಿಯ ಮಗ ಷಣ್ಮುಖಪ್ಪ " ನನ್ನ ತಂದೆಯೇ ನನ್ನ ತಾಯಿಯನ್ನು ಕೊಲೆ ಮಾಡಿದ್ದಾನೆ" ಎಂದು ದೂರು ನೀಡಿದ್ದು, ಸಿಂದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನಾ ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ದೇಹದ ಎರಡು ತುಂಡುಗಳಲ್ಲಿ ಮುಖ ಇದ್ದ ಒಂದು ಭಾಗ ಪತ್ತೆ ಹಚ್ಚಿದ್ದು, ಇನ್ನೊಂದು ಭಾಗದ ಹುಡುಕಾಟ ನಡೆಸಿದ್ದಾರೆ.

ಆರೋಪಿ ಒಂದು ರೀತಿಯ ಮಾನಸಿಕ ಅಸ್ವಸ್ಥನಾಗಿದ್ದು, ಒಮ್ಮೊಮ್ಮೆ ಒಳ್ಳೆಯವನಾಗಿರುತ್ತಿದ್ದ ಮತ್ತೊಮ್ಮೆ ವಿಕೃತನಾಗಿ ವರ್ತಿಸುತ್ತಿದ್ದ. ಇದರಿಂದ ಮನೆಯ ವ್ಯವಹಾರವನ್ನೆಲ್ಲ ಆತನ ಕೈಯಿಂದ ಕಸಿದುಕೊಂಡು ಮಕ್ಕಳು ನಿಭಾಯಿಸುತ್ತಿದ್ದರು. ಇದರಿಂದ ಪತ್ನಿ ನೀಲಮ್ಮಳೊಂದಿಗೆ ದಿನನಿತ್ಯ ಕಲಹ ಮಾಡುತ್ತಿದ್ದ. ಸೋಮವಾರ ರಾತ್ರಿ ಕಲಹ ತಾರಕಕ್ಕೇರಿ ಕೊಲೆಯಲ್ಲಿ ಅಂತ್ಯಗೊಂಡಿದೆ.

Snehajeevi Kannada Daily, Printed and Published and owned by ABDULHAMEED SHALAGAR House No. 6421 Rajput Oni, Betageri-Gadag, State : Karnataka
Editor : ABDULHAMEED SHALAGAR, Printed at : Prabhu Graphics, 3094A, Station Road Gadag, District Gadag 582 101 State : Karnataka